# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಡಿಸೆಂಬರ್ 04, 2024

ಸಂಪುಟ : 51 ಸಂಚಿಕೆ : 201 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಕಡೆಗೂ ಮರಳು ನೀತಿ ಜಾರಿ

## ಸಾಮಾನ್ಯ ಮರಳು ಪ್ರತಿ ಮೆಟ್ರಿಕ್ ಟನ್‌ಗೆ 300 ರೂ. ನಿಗದಿ

ಬೆಂಗಳೂರು, ಡಿ. 3- ಕಡೆಗೂ ಮರಳು ನೀತಿ ಜಾರಿಗೊಳಿಸಿರುವ ಸರ್ಕಾರ ಇಂದಿನಿಂದಲೇ ಸಾಮಾನ್ಯ ಮರಳಿನ ಪ್ರತಿ ಮೆಟ್ರಿಕ್ ಟನ್‌ಗೆ 300 ಹಾಗೂ ಉತ್ತಮ ದರ್ಜೆಯ ಮರಳಿಗೆ 850 ರೂ.ನಂತೆ ದರ ನಿಗದಿ ಪಡಿಸಿದೆ.

ನದಿ ಪಾತ್ರದಲ್ಲಿ ದೊರಕುವ ಮರಳನ್ನು ಉತ್ತಮ ದರ್ಜೆ ಎಂದು ಪ್ರತಿ ಟನ್‌ಗೆ 850 ರೂ. ನಿಗದಿ ಪಡಿಸಿರುವ ಸರ್ಕಾರ, ಪಂಚಾಯತ್ ಮಟ್ಟದಲ್ಲಿ ಹಳ್ಳಕೊಳ್ಳದಲ್ಲಿ ತೆಗೆಯುವ ಮರಳಿಗೆ ಪ್ರತಿ ಟನ್‌ಗೆ 300 ರೂ.ನಂತೆ ನಿಗದಿ ಪಡಿಸಿದೆ.

ಈ ಸಂಬಂಧ ತೋಟಗಾರಿಕೆ ಹಾಗೂ ಗಣಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪತ್ರಿಕಾ ಹೇಳಿಕೆ ನೀಡಿದ್ದು, ಸಾರ್ವಜನಿಕರಿಗೆ ಸುಲಭವಾಗಿ ಮತ್ತು ಕೈಗೆಟಕುವ ದರದಲ್ಲಿ ಮರಳು ಸಿಗಲಿ ಎಂಬ ಉದ್ದೇಶದಿಂದ ಮರಳು ನೀತಿ ಜಾರಿಗೆ ತಂದಿದ್ದೇವೆ.

ಸಾರ್ವಜನಿಕ ಹಾಗೂ ಸ್ಥಳೀಯ ಸರ್ಕಾರಿ ಕಾಮಗಾರಿಗಳಿಗೆ ನಿಗದಿತ ಕಡಿಮೆ ಬೆಲೆಯಲ್ಲಿ



**ಸಾರ್ವಜನಿಕರಿಗೆ ಸುಲಭವಾಗಿ ಮತ್ತು ಕೈಗೆಟಕುವ ದರದಲ್ಲಿ ಮರಳು ಸಿಗಲಿ ಎಂಬ ಉದ್ದೇಶದಿಂದ ಮರಳು ನೀತಿ ಜಾರಿಗೆ ತಂದಿದ್ದೇವೆ.**
**- ಸಚಿವ ಎಸ್.ಎಸ್. ಮಲ್ಲಿಕಾರ್ಜುನ್**

ಗ್ರಾಮ ಪಂಚಾಯತ್ ಮಟ್ಟದಲ್ಲಿ ಮರಳು ಪೂರೈಸಲು ಮೂರು ಶ್ರೇಣಿಗಳಾಗಿ ವಿಂಗಡಿಸಲಾಗಿದೆ ಎಂದಿದ್ದಾರೆ. ಹಳ್ಳ-ಕೊಳ್ಳದಲ್ಲಿ ಲಭ್ಯ ಮರಳು ತೆಗೆದು ವಿಲೇವಾರಿ ಜವಾಬ್ದಾರಿಯನ್ನು ಆಯಾ ಗ್ರಾಮ ಪಂಚಾಯತ್‌ಗಳಿಗೆ ವಹಿಸಿ ಪ್ರತಿ ಮೆಟ್ರಿಕ್ ಟನ್ ಬೆಲೆಯನ್ನು 300 ರೂ.ಗೆ ನಿಗದಿ ಪಡಿಸಲಾಗಿದೆ ಎಂದು ಹೇಳಿದ್ದಾರೆ.

ನದಿ ಹಾಗೂ ಅದರ ಪಾತ್ರಗಳಲ್ಲಿ ಲಭ್ಯವಿರುವ ಬ್ಲಾಕ್‌ಗಳನ್ನು 4 ಮತ್ತು 5ನೇ ಉನ್ನತ ಶ್ರೇಣಿಯೆಂದು ಗುರುತಿಸಿ, ಅಂತಹ ಪ್ರದೇಶ ಅಥವಾ ಗುಡ್ಡಗಳನ್ನು ಖಾಸಗಿ ಗಣಿಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳು ಟೆಂಡರ್ ಮೂಲಕ ಈ ಬ್ಲಾಕ್‌ಗಳನ್ನು ಪಡೆದು ಸರ್ಕಾರಕ್ಕೆ ರಾಯಲ್ಟಿ ನೀಡಿ ಗಣಿಗಾರಿಕೆ ಮಾಡಬಹುದಾಗಿದೆ. ಹೊಸ ನೀತಿಯಂತೆ ಮರಳು ಬ್ಲಾಕ್‌ಗಳ ಟೆಂಡರ್ ಅನ್ನು ಆಯಾ ಜಿಲ್ಲಾ ಸಮಿತಿಯಿಂದ ನಡೆಸಲಾಗುವುದು.

ಜಿಲ್ಲಾವಾರು ಗುರುತಿಸಲಾಗುವ ಮರಳು ಬ್ಲಾಕ್‌ಗಳಿಗೆ ಪರಿಶಿಷ್ಟ ಜಾತಿ, (2ನೇ ಪುಟಕ್ಕೆ)

# ವಿಕಲಚೇತನರ ಶ್ರೇಯೋಭಿವೃದ್ಧಿಗೆ 44 ಕೋಟಿ ರೂ.: ಸಿಎಂ ಭರವಸೆ

ಬೆಂಗಳೂರು, ಡಿ. 3- ವಿಕಲಚೇತನರ ಸಬಲೀಕರಣ ಹಾಗೂ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಪ್ರಸಕ್ತ ಸಾಲಿನ ಪೂರಕ ಅಂದಾಜಿನಲ್ಲಿ 44 ಕೋಟಿ ರೂ. ಮಂಜೂರು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದರು.



ವಿಶ್ವ ವಿಕಲಚೇತನರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಂವಿಧಾನ ಎಲ್ಲರಿಗೂ ಬದುಕುವ ಮತ್ತು ಉದ್ಯೋಗ ಪಡೆಯುವ ಅವಕಾಶ ನೀಡಿದೆ, ರಾಜ್ಯದಲ್ಲಿ ಸುಮಾರು 15 ಲಕ್ಷ ವಿಕಲಚೇತನರಿದ್ದು, ಇವರ ಆರೈಕೆಗೆ ವಿಶೇಷ ಸೌಲಭ್ಯ ನೀಡುವುದು ಸರ್ಕಾರದ ಕರ್ತವ್ಯವಾಗಿದೆ ಎಂದರು.

ಈ ವರ್ಷ ನಾಲ್ಕು ಬಗೆಯ ವಿಕಲಚೇತನರ ಆರೈಕೆದಾರರಿಗೆ ಪ್ರತಿ ತಿಂಗಳು 1000 ರೂ. ಆರೈಕೆದಾರರ ಭತ್ಯೆ ನೀಡುವ ಯೋಜನೆಯನ್ನು ದೇಶದಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕ ಘೋಷಿಸಲಿದೆ.

ಪ್ರಸಕ್ತ ಸಾಲಿನಲ್ಲಿ 7 ಜಿಲ್ಲೆಗಳಲ್ಲಿ 2 ಕೋಟಿ ರೂ. ವೆಚ್ಚದಲ್ಲಿ 10 ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಗಳನ್ನು ತೆರೆಯಲಾಗಿದೆ, ಇದಲ್ಲದೇ ಇನ್ನೂ 13 ಹೊಸ ಶಾಲೆಗಳನ್ನು ಪ್ರಸಕ್ತ ಸಾಲಿನಲ್ಲಿ (4ನೇ ಪುಟಕ್ಕೆ)

# ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ



ನವದೆಹಲಿ, ಡಿ.3- ಅಮೆರಿಕದ ಡಾಲರ್ ಎದುರು ಮಂಗಳವಾರ ರೂಪಾಯಿ ಮೌಲ್ಯವು 4 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ 84.76 ರೂ.ಗೆ (4ನೇ ಪುಟಕ್ಕೆ)


## ವಿದೇಶ ಪ್ರವಾಸ - ಶುಭ ಹಾರೈಕೆ




ಶ್ರೀಮತಿ ಸಿದ್ದಮ್ಮ ದಿ|| ಬಸಪ್ಪ ಜಿ. ನಿವೃತ್ತ ಮುಖ್ಯೋಪಾಧ್ಯಾಯರು,
ಹುಣಸೆಕಟ್ಟೆ, ದಾವಣಗೆರೆ ತಾಲ್ಲೂಕು
ಅಜ್ಜನ ಆಸೆಯನ್ನು ಪೂರೈಸಿದ ಮೊಮ್ಮಗನಾದ

**ಚಿ|| ಗಂಗಾಧರ ಜಿ.ಆರ್.,** M.S. in Architech
ಲಿವರ್‌ಪೂಲ್ ಯುನಿವರ್ಸಿಟಿ, ಲಿವರ್‌ಪೂಲ್ ಸಿಟಿ, UK ಬ್ಲಾಕ್‌ಬರ್ನ್ (Block Burncity) ಸಿಟಿಯಲ್ಲಿ ಉದ್ಯೋಗ ಮಾಡುತ್ತಿದ್ದು, ಇವರನ್ನು ನೋಡಲು
ತಂದೆ-ತಾಯಿಗಳಾದ : **ಶ್ರೀಮತಿ ಸವಿತ ಬಿ.ಆರ್ ಮತ್ತು ರಮೇಶ್ ಜಿ.**
ಇವರು ದಿನಾಂಕ : 6.12.2024ರ ಶುಕ್ರವಾರ
ಬೆಂಗಳೂರು ಮೂಲಕ UK ದೇಶಕ್ಕೆ ಪ್ರಯಾಣ ಬೆಳೆಸಲಿದ್ದಾರೆ.
ಇವರ ವಿದೇಶ ಪ್ರವಾಸ ಸುಖಕರವಾಗಿರಲೆಂದು ಶುಭ ಹಾರೈಸುವವರು...

ಚಿ|| ವಿಕಾಸ್ ಜಿ.ಆರ್., ಬಿಇ., ಸಿವಿಲ್, ಅಬುದಾಬಿ.
ಶ್ರೀಮತಿ ಸುಧಾ ದಿ|| ಜಗದೀಶ್ ಮತ್ತು ಮಕ್ಕಳು, ಅಳಿಯಂದಿರು, ಹುಣಸೆಕಟ್ಟೆ.
ಶ್ರೀಮತಿ ಯಶೋಧ ಮತ್ತು ದಯಾನಂದ್ ಮತ್ತು ಮಗಳು, ಹುಣಸೆಕಟ್ಟೆ.
ಶ್ರೀಮತಿ ಸುಜಾತ ದಿ|| ಶಿವನಗೌಡ್ರು ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ದೊಗ್ಗಳ್ಳಿ ಶಂಕ್ರಮ್ಮ, ದಿ|| ದೊಗ್ಗಳ್ಳಿ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಗಿರಿಜಮ್ಮ & ಶ್ರೀ ರೇವಣಸಿದ್ದಯ್ಯ, ನಿವೃತ್ತ ಇಂಜಿನಿಯರ್ & ಮಕ್ಕಳು, ದಾವಣಗೆರೆ.
ಶ್ರೀಮತಿ ದಿ|| ನೀಲಮ್ಮ & ಶ್ರೀ ಜಯ್ಯಪ್ಪ, ನಿವೃತ್ತ ಎಡಿಎಲ್‌ಆರ್. & ಮಕ್ಕಳು, ದಾವಣಗೆರೆ.
ಶ್ರೀಮತಿ ಲತಾ ಮತ್ತು ಶ್ರೀ ಗೂಳಪ್ಪ ಯು. & ಮಗಳು, ಅಳಿಯ, ಮೊಮ್ಮಗ,ಬೆಂಗಳೂರು.
ಶ್ರೀಮತಿ ಪುಷ್ಪಾ ಮತ್ತು ಶ್ರೀ ಮೋಹನ್ ಹೆಚ್.ಎಸ್. ಮತ್ತು ಮಕ್ಕಳು, ಬೆಂಗಳೂರು.
ಶ್ರೀಮತಿ ಪೂರ್ಣಿಮಾ ದಿ|| ಶಂಕರಮೂರ್ತಿ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಲಲಿತಮ್ಮ ಮತ್ತು ಶ್ರೀ ಸಿದ್ದೇಶಪ್ಪ ಹನಗವಾಡಿ. ನಿವೃತ್ತ ಸಿಡಿಪಿಓ & ಮಕ್ಕಳು, ದಾವಣಗೆರೆ.
ಶ್ರೀ ಬಿ. ಉಮೇಶ್ ಮತ್ತು ಶ್ರೀಮತಿ ಯು.ಕೆ. ಪುಷ್ಪಾ ಮತ್ತು ಮಕ್ಕಳು, ಮೊಮ್ಮಕ್ಕಳು, ಬುಳ್ಳಾಪುರ. ಮೊ. : 98445 83471, 97417 49700


# ಮುಡಾ ಅಕ್ರಮ ಬಗ್ಗೆ ಪುರಾವೆ ದೊರೆತಿವೆ ಎಂದ ಇಡಿ

ಬೆಂಗಳೂರು, ಡಿ.3- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ 14 ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಹಸ್ತಾಂತರಿಸಿರುವ ಪ್ರಕರಣದಲ್ಲಿ ಹಲವು ಅಕ್ರಮಗಳು ನಡೆದಿರುವ ಬಗ್ಗೆ ಪುರಾವೆಗಳು ಸಿಕ್ಕಿವೆ ಎಂದು ಇಡಿ ತಿಳಿಸಿದೆ.

**ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮತ್ತಷ್ಟು ಸಂಕಷ್ಟ**

ಇದರಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ.

ಕೇಂದ್ರ ತನಿಖಾ ಸಂಸ್ಥೆ ಪ್ರಕರಣ ಸಂಬಂಧ ಕರ್ನಾಟಕ ಲೋಕಾಯುಕ್ತ ಇಲಾಖೆಗೆ ಇತ್ತೀಚೆಗೆ ಕಳುಹಿಸಿದ ಸಂವಹನದಲ್ಲಿ, ಮುಡಾ ಒಟ್ಟು 1,095 ಸೈಟ್‌ಗಳನ್ನು ಬೇನಾಮಿ ಮತ್ತು ಇತರ ವಹಿವಾಟುಗಳಲ್ಲಿ 'ಅಕ್ರಮವಾಗಿ' ಮಂಜೂರು ಮಾಡಿದೆ ಎಂಬುದು ತನ್ನ ತನಿಖೆಯಲ್ಲಿ ಕಂಡುಬಂದಿದೆ ಎಂದು ಹೇಳಿಕೊಂಡಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ವೇಳೆ, ಭೂಪರಿವರ್ತನೆಯಲ್ಲಿ 'ಕಾನೂನುಬದ್ಧ ಮಾರ್ಗಸೂಚಿಗಳ ಉಲ್ಲಂಘನೆ', ಕಚೇರಿಯ ಕಾರ್ಯವಿಧಾನಗಳ ಉಲ್ಲಂಘನೆ, 'ಅನಾವಶ್ಯಕ' ಕೃಪಾಕಟಾಕ್ಷ ಮತ್ತು ಪ್ರಭಾವದ ಬಳಕೆ ಹಾಗೂ ಸಹಿಗಳ 'ಫೋರ್ಜರಿ'ಗೆ (2ನೇ ಪುಟಕ್ಕೆ)

# 2030ರ ವೇಳೆಗೆ ಏಡ್ಸ್ ಮುಕ್ತ ದೇಶ ಮಾಡಲು ಶ್ರಮಿಸೋಣ



ದಾವಣಗೆರೆ, ಡಿ.3- 2030ರ ವೇಳೆಗೆ ಭಾರತದಿಂದ ಏಡ್ಸ್ ಎಂಬ ಮಾರಕ ರೋಗವನ್ನು ಓಡಿಸಲು ಎಲ್ಲಾ ಇಲಾಖೆಗಳ ಜೊತೆಗೆ ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ್ ಹೇಳಿದರು.

**ವಿಶ್ವ ಏಡ್ಸ್ ದಿನಾಚರಣೆ' ಉದ್ಘಾಟಿಸಿದ ನ್ಯಾ.ಮಹಾವೀರ ಕರೆಣ್ಣನವರ್**

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಏಡ್ಸ್ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಏಡ್ಸ್ ಎಂಬ ಪದ ಈಗ ಜಗಜ್ಜಾಹೀರಾಗಿದೆ. ಏಡ್ಸ್ ಹೇಗೆ ಹರಡುತ್ತದೆ ಎಂಬ ಮಾಹಿತಿಯೂ ಎಲ್ಲರಿಗೆ ತಿಳಿದಿದೆ. ಆದಾಗ್ಯೂ, ಅಸಡ್ಡೆ, ನಾಚಿಕೆ, ಅಸುರಕ್ಷಿತ ಲೈಂಗಿಕ ಕ್ರಿಯೆಗಳಿಂದಾಗಿ ಯುವಕರು ರೋಗಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ ಎಂದು ಹೇಳಿದರು.

ಸಾಕಷ್ಟು ಸುಧಾರಣೆಗಳ ನಡುವೆಯೂ ಸೋಂಕು ಹರಡುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅರಿತು, ಇತರರಿಗೂ (4ನೇ ಪುಟಕ್ಕೆ)

## ಹೆಚ್‌ಐವಿ: 14ನೇ ಸ್ಥಾನದಲ್ಲಿ ದಾವಣಗೆರೆ

**ಹೆಚ್‌ಐವಿ ಸೋಂಕಿತ ಪಟ್ಟಿಯಲ್ಲಿ ರಾಷ್ಟ್ರಮಟ್ಟದಲ್ಲಿ ಕರ್ನಾಟಕ 9ನೇ ಸ್ಥಾನದಲ್ಲಿದ್ದರೆ ರಾಜ್ಯಮಟ್ಟದಲ್ಲಿ ದಾವಣಗೆರೆ 14ನೇ ಸ್ಥಾನದಲ್ಲಿದೆ. ಇಲ್ಲಿಯವರೆಗೆ 13 ಸಾವಿರ ಸೋಂಕಿತರು ನೋಂದಾಯಿಸಿಕೊಂಡಿ ದ್ದಾರೆ. ಎಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಸಂಯೋಜಕ ಜಗದೀಶ್ ಹೇಳಿದರು.**

**ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, 20 ರಿಂದ 40 ವಯಸ್ಸಿನ ಒಳಗಿನವರೇ ಹೆಚ್ಚಾಗಿ ಸೋಂಕಿಗೆ ತುತ್ತಾಗುತ್ತಿದ್ದಾರೆ ಎಂದರು. ಇತ್ತೀಚಿನ ದಿನಗಳಲ್ಲಿ ಪುರುಷ -ಪುರುಷರು ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಿರುವ ಪ್ರಕರಣ ಹೆಚ್ಚಾಗಿದ್ದು, ಇದರಿಂದಲೂ ಸೋಂಕು ಹರಡುತ್ತಿದೆ. ಮುಖ್ಯವಾಗಿ ಯುವಕ-ಯುವತಿಯರು ಮದುವೆ ಆಗುವವರೆಗೂ ತಮ್ಮ ದೈಹಿಕ ಬಯಕೆಗಳನ್ನು ಬದಿಗಿಟ್ಟು ಓದಿನ ಬಗ್ಗೆ ಗಮನ ಕೊಡಬೇಕು ಎಂದು ಸಲಹೆ ನೀಡಿದರು.**

# ಸಚಿವೆ ನಿರ್ಮಲಾ ವಿರುದ್ಧದ ಎಫ್‌ಐಆರ್ ರದ್ದು

ಬೆಂಗಳೂರು, ಡಿ. 3- ಚುನಾವಣಾ ಬಾಂಡ್ ಹೆಸರಲ್ಲಿ ಸುಲಿಗೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಇತರರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ರದ್ದುಗೊಳಿಸಿ ರಾಜ್ಯ ಹೈಕೋರ್ಟ್ ಇಂದಿಲ್ಲಿ ಮಹತ್ವದ ತೀರ್ಪು ನೀಡಿದೆ.

ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಎಫ್‌ಐಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ಎಫ್‌ಐಆರ್ ರದ್ದು ಪಡಿಸಿದೆ.

ನಿರ್ಮಲಾ ಸೀತಾರಾಮನ್, ಕಟೀಲ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಇ.ಡಿ. (4ನೇ ಪುಟಕ್ಕೆ)

# ಪದ್ಮಶಾಲಿ ಸಮಾಜ ಸೇವಾ ಸಂಘಕ್ಕೆ ಎಸ್‌ಟಿಪಿ ತಿಪ್ಪೇಶ್ ಅಧ್ಯಕ್ಷ

ದಾವಣಗೆರೆ, ಡಿ. 3- ನಗರದ ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷರಾಗಿ ಬೊಮ್ಮ



ತಿಪ್ಪೇಸ್ವಾಮಿ (ಎಸ್‌ಟಿಪಿ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ನಿನ್ನೆ ನಡೆದ ಪದ್ಮಶಾಲಿ ಸಮಾಜ ಸೇವಾ ಸಂಘದ ಸರ್ವ ಸದಸ್ಯರ ಮಹಾಸಭೆಯಲ್ಲಿ ಈ ಆಯ್ಕೆ ನಡೆಯಿತು.

ಪ್ರಧಾನ ಕಾರ್ಯದರ್ಶಿಯಾಗಿ ವದ್ದಿ ನರಸಿಂಹಮೂರ್ತಿ, ಉಪಾಧ್ಯಕ್ಷರುಗಳಾಗಿ ಅರಣಿ ನಿಂಗಪ್ಪ, ಸೇಪೂರ್ (6ನೇ ಪುಟಕ್ಕೆ)

# ಪತ್ರ ಬರಹಗಾರರ ಒಕ್ಕೂಟದ ರಾಜ್ಯಾಧ್ಯಕ್ಷರಾಗಿ ಸಂಗಮೇಶ್



ದಾವಣಗೆರೆ, ಡಿ. 3- ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಿಗೆ ಹೊಂದಿದ ಪತ್ರ ಬರಹಗಾರರ ಒಕ್ಕೂಟವನ್ನು ಅಸ್ತಿತ್ವಕ್ಕೆ ತರಲಾಗಿದ್ದು, ಈ ಒಕ್ಕೂಟದ ರಾಜ್ಯಧ್ಯಕ್ಷರಾಗಿ (2ನೇ ಪುಟಕ್ಕೆ)ನಗರದ ಹಿರಿಯ

# ವೀರಶೈವ ಮಹಾಸಭೆ ಜಿಲ್ಲಾ ಗೌರವಾಧ್ಯಕ್ಷರಾಗಿ ಎಸ್.ಜಿ.ಉಳುವಯ್ಯ



ದಾವಣಗೆರೆ, ಡಿ. 3- ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಗೌರವಾಧ್ಯಕ್ಷರಾಗಿ ಕೈಗಾರಿಕೋದ್ಯಮಿ ಎಸ್.ಜಿ. ಉಳುವಯ್ಯ ನೇಮಕಗೊಂಡಿದ್ದಾರೆ.

ವೀರಶೈವ (2ನೇ ಪುಟಕ್ಕೆ)


## ಸಾರ್ವಜನಿಕರಿಗೆ ಅಂತಿಮ ದರ್ಶನ

#3594, 7ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ಎದುರು, ದಾವಣಗೆರೆ ಟೌನ್
ಚಿತ್ರದುರ್ಗ ಜಿ|| ಹೊಳಲ್ಕೆರೆ ತಾ|| ಹಿರಿಯೂರು ಗ್ರಾಮದ
ರುಮ್ಮಾಗಟ್ಟೆ ಶ್ರೀ ಶಿವರುದ್ರಪ್ಪನವರ ಮಗನಾದ



**ಶ್ರೀ ಆರ್.ಎಸ್.ಶಿವಪ್ರಕಾಶ (ರೋಮಜಪ್ಪ)**
ವಯಸ್ಸು 81 ವರ್ಷ
ಮಾಲೀಕರು, ಶ್ರೀ ತಿಪ್ಪೇಸ್ವಾಮಿ ಎಲೆಕ್ಟ್ರಿಕಲ್, ನರಸರಾಜ ರೋಡ್, ದಾವಣಗೆರೆ

ಇವರು ದಿನಾಂಕ 03-12-2024 ಮಧ್ಯಾಹ್ನ 2.36ಕ್ಕೆ ದೈವಾಧೀನರಾಗಿದ್ದು ಮೃತರ ಇಚ್ಛೆಯಂತೆ ದಾವಣಗೆರೆಯ ಜೆ.ಜೆ.ಎಂ.ಮೆಡಿಕಲ್ ಕಾಲೇಜ್‌ಗೆ ದೇಹದಾನ ಮಾಡಲು ಇಚ್ಛೆಯಿಸುವುದರಿಂದ ಸದರಿಯವರ ಸಾರ್ವಜನಿಕ ದರ್ಶನವನ್ನು ದಿನಾಂಕ 05-12-2024ರ ಗುರುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು.





## ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆ





2024-2029
ಜಿಲ್ಲಾ ಶಾಖೆ ದಾವಣಗೆರೆ
ದಿನಾಂಕ: 04-12-2024ರಂದು
ನಡೆಯಲಿರುವ ಚುನಾವಣೆಯಲ್ಲಿ
ದಾವಣಗೆರೆ ಜಿಲ್ಲೆಯ ನೂತನ ಚುನಾಯಿತ ತಾಲ್ಲೂಕು ಅಧ್ಯಕ್ಷರು ಹಾಗೂ ಜಿಲ್ಲಾ ಶಾಖೆಯ ನಿರ್ದೇಶಕ ಬಂಧುಗಳು
ತಮ್ಮ ಅಮೂಲ್ಯ ಮತಗಳನ್ನು ನೀಡುವ ಮೂಲಕ ನಮ್ಮನ್ನು ಆಯ್ಕೆ ಮಾಡಲು ವಿನಂತಿಸಿದೆ.

ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿ



ಶಿವಕುಮಾರ್ ಜಿ.ಬಿ.

ಜಿಲ್ಲಾ ಖಜಾಂಚಿ ಸ್ಥಾನದ ಅಭ್ಯರ್ಥಿಯಾಗಿ



ತಿಪ್ಪೇಸ್ವಾಮಿ ಬಿ.ಆರ್.

ರಾಜ್ಯಪರಿಷತ್ ಸದಸ್ಯ ಸ್ಥಾನದ ಅಭ್ಯರ್ಥಿಯಾಗಿ



ಓಬಳಪ್ಪ ಜಿ.

ಚುನಾವಣೆ ನಡೆಯುವ ಸ್ಥಳ:
ಮೇರಿದೇವಾಸಿಯಾ ಸಭಾಂಗಣ, ಸರ್ಕಾರಿ ನೌಕರರ ಸಮುದಾಯ ಭವನ, ದಾವಣಗೆರೆ

# ನಿರಂತರ ಅಧ್ಯಯನದಿಂದ ಉತ್ತಮ ವಕೀಲರಾಗಲು ಸಾಧ್ಯ

## ಹರಪನಹಳ್ಳಿ : ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ಸಿವಿಲ್ ಕಿರಿಯ ನ್ಯಾಯಾಧೀಶರಾದ ಎಸ್.ಪಿ. ಮನುಶರ್ಮ

ಹರಪನಹಳ್ಳಿ, ಡಿ. 3 - ನಿರಂತರ ಅಧ್ಯಯನದ ಮೂಲಕ ಉತ್ತಮ ವಕೀಲರಾಗಲು ಅವಕಾಶವಿದ್ದು, ವಕೀಲ ವೃತ್ತಿಯ ಘನತೆ, ಗೌರವವನ್ನು ಕಾಪಾಡಿಕೊಂಡು ಮುನ್ನಡೆಯಬೇಕು ಎಂದು ಸಿವಿಲ್ ಕಿರಿಯ ನ್ಯಾಯಾಧೀಶರಾದ ಎಸ್.ಪಿ. ಮನುಶರ್ಮ ಹೇಳಿದರು.




ಪಟ್ಟಣದ ವಕೀಲರ ಸಂಘದಲ್ಲಿ ತಾಲ್ಲೂಕು ವಕೀಲರ ಸಂಘದಿಂದ ಆಯೋಜಿಸಲಾಗಿದ್ದ ವಕೀಲರ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ಬಾಬು ರಾಜೇಂದ್ರ ಪ್ರಸಾದ್ ರವರ ಜನ್ಮದಿನದ ಅಂಗವಾಗಿ ವಕೀಲರ ದಿನಾಚರಣೆ ಆಚರಿಸಲಾಗುವುದು, ಕಿರಿಯ ವಕೀಲ ವೃತ್ತಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಹಿರಿಯ ವಕೀಲರಿಗೆ ಗೌರವಿಸೋಣ, ಕಿರಿಯ ಹಿರಿಯ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ಉತ್ತಮ ವಕೀಲರಾಗಿ ಯಶಸ್ವಿಯಾಗಿ ಬದಲಾವಣೆ ಆಗುವುದಕ್ಕೆ ಸಾಧ್ಯವಾಗುತ್ತದೆ.

ಸರ್ಕಾರದ ಕಾನೂನು, ಕಾಯ್ದೆಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ನ್ಯಾಯಾಲಯ ನಮ್ಮ ಜ್ಞಾನ ದೇಗುಲ. ಈ ಜ್ಞಾನ ದೇಗುಲದಲ್ಲಿ ಸೃಜನಶೀಲ ವಕೀಲರಾಗಿ ಬೆಳೆಯಬೇಕು, ಎಂದರು.

ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಮಾತನಾಡಿ, ವಕೀಲರು ಹೆಚ್ಚು ಹೆಚ್ಚು ಕಾನೂನು ತಿಳಿದುಕೊಂಡರೆ ಉತ್ತಮ ವಕೀಲರಾಗಲು ಸಾಧ್ಯ. ವಕೀಲರು ನ್ಯಾಯಾಲಯದ ಕಾರ್ಯ ಕಲಾಪಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗವಹಿಸಿದ್ದಲ್ಲಿ ಮಾತ್ರ ವೃತ್ತಿ ಪರತೆ ಹೆಚ್ಚುತ್ತದೆ. ಜತೆಗೆ ತಮ್ಮ ವೃತ್ತಿಯಲ್ಲಿ ಶ್ರದ್ಧೆ ಮತ್ತು ಪ್ರಾಮಾಣಿ ಕತೆಯಿಂದ ಕೆಲಸ ಮಾಡಿದರೆ ಹೆಚ್ಚು ಜ್ಞಾನ ವೃದ್ಧಿಯಾಗುತ್ತದೆ ಎಂದರು.

ವಕೀಲರಾದ ಬಿ. ಕೃಷ್ಣ ಮೂರ್ತಿ ಮಾತನಾಡಿ, ವಕೀಲ ವೃತ್ತಿ ಬಹಳ ಕಠಿಣವಾದ ವೃತ್ತಿಯಾಗಿದ್ದು, ಶ್ರದ್ಧೆಯಿಂದ ಅಭ್ಯಾಸ ಮಾಡಿಕೊಂಡು ನ್ಯಾಯಾಲಯಕ್ಕೆ ತೆರಳಿದಾಗ ಕಕ್ಷಿದಾರರಿಗೆ ನ್ಯಾಯ ಕೊಡಿಸಿದ್ದಂತಾಗುತ್ತದೆ. ವಕೀಲರ ಸಂಘಕ್ಕೆ ಸರ್ಕಾರದ ಅನುದಾನದಲ್ಲಿ ವಕೀಲರ ಗ್ರಂಥಾ ಲಯವನ್ನು ಸ್ಥಾಪಿಸಬೇಕೆಂದರು.

ವಕೀಲ ಕೆ. ಜಗದಪ್ಪ ಮಾತನಾಡಿ, ಜಗತ್ತಿನ ಏಕೈಕ ಶಕ್ತಿಶಾಲಿ ವೃತ್ತಿ ಎಂದರೆ ವಕೀಲ ವೃತ್ತಿ, ಶ್ರೇಷ್ಠವಾದ ವೃತ್ತಿ ಇದಾಗಿದೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಏಕೈಕ ವೃತ್ತಿಯೆಂದರೆ ವಕೀಲ ವೃತ್ತಿ ಇಂತಹ ವಕೀಲ ವೃತ್ತಿಯನ್ನು ಸರಳವಾಗಿ ಕೊಂಡೊಯ್ದು ಕಕ್ಷಿದಾರರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕು ಎಂದರು.

ವಕೀಲರಾದ ಪಿ. ಜಗದೀಶ್ ಗೌಡ, ಕಣವಿಹಳ್ಳಿ ಮಂಜುನಾಥ್, ಮಾತನಾಡಿದರು. ಈ ಸಂಧರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಆರ್. ಉಷಾರಾಣಿ ವಕೀಲರ ಸಂಘದ ಕಾರ್ಯದರ್ಶಿಯಾದ ಕೇಶವಮೂರ್ತಿ ಹೆಚ್.ಎಂ. ಖಜಾಂಚಿ ಹೂಲೆಪ್ಪ, ಎಂ. ಮೃತ್ಯುಂಜ್ಯಯ, ಬಸವನಗೌಡ ಬಿ.ವಿ. ಕಾರ್ಯ ಕಾರಿಣಿ, ಮಂಡಳಿ ಸದಸ್ಯ ಪ್ರಭಾಕರ, ಎಂ. ನಳಿನ, ಬಿ. ತಿಪ್ಪೇಶ್, ಸಿ. ಹಾಲೇಶ್, ಕಂಡ್ಯಪ್ಪ, ಕರಿಯಪ್ಪ, ಸೇರಿದಂತೆ ಇತರೆ ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಹಾಜರಿದ್ದರು.

# ಒಡೆಯರ ಚಂದ್ರಶೇಖರ ಶಿವಾಚಾರ್ಯ ಶ್ರೀಗಳ ಪುಣ್ಯಾರಾಧನೆಯಲ್ಲಿ ಕೃಷಿ ಮೇಳ



ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀ

ಹೊನ್ನಾಳಿ, ಡಿ.3- ಬರುವ ಮಾರ್ಚ್ ತಿಂಗಳಲ್ಲಿ ನಡೆಯುವ ಲಿಂ. ಒಡೆಯರ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳನ್ನೊಳಗೊಂಡ ಪಂಚ ರಾಜ್ಯಗಳ ಕೃಷಿ ಮೇಳ ಹಮ್ಮಿಕೊಳ್ಳಲಾಗುವುದು ಎಂದು ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹಿರೇಕಲ್ಮಠದಲ್ಲಿ ಭಾನುವಾರ ರಾತ್ರಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಧರ್ಮಸಭೆಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಕೋವಿಡ್‌ಗಿಂತ ಮುಂಚೆ ಶ್ರೀಮಠದಲ್ಲಿ ರಾಜ್ಯ ಮಟ್ಟದ ಕೃಷಿ ಮೇಳ ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿತ್ತು. ಈಗ ಅದೇ ಮಾದರಿಯ ಹಾಗೂ ಅನ್ನದಾತ ರೈತನ ಹಿತಕ್ಕಾಗಿ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕೇರಳ ಸೇರಿದಂತೆ ಪಂಚ ರಾಜ್ಯಗಳ ಕೃಷಿ ಮೇಳ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಶ್ರೀಮಠದ ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠದ ವತಿಯಿಂದ ಎಲ್‌ಕೆಜಿಯಿಂದ ಪದವಿ ಹಾಗೂ ಬಿ.ಇಡಿ. ಪದವಿಗಳವರೆಗೆ ಶಿಕ್ಷಣ ಸಂಸ್ಥೆಗಳನ್ನು ತೆರೆದು ಬಡ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಮುಂದಿನ ದಿನಗಳಲ್ಲಿ ಕೃಷಿ ಕಾಲೇಜು ತರುವ ಎಲ್ಲಾ ಪ್ರಯತ್ನಗಳು ನಡೆದಿವೆ ಇದಕ್ಕಾಗಿ ಇಲಾಖೆಯಿಂದ ಒಂದು ಸುತ್ತಿನ ಪರಿವೀಕ್ಷಣೆ ನಡೆದಿದೆ ಎಂದರು.

ಶಿವಮೊಗ್ಗ ಕೃಷಿ ವಿಶ್ವ ವಿದ್ಯಾನಿಲಯದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿ, ಕೃಷಿ ವಿ. ವಿದ್ಯಾನಿಲಯದ ಕುಲಪತಿ ಆರ್.ಸಿ.ಜಗದೀಶ್ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ವೀರಶೈವ ಮಠಗಳು ಅನ್ನ ದಾಸೋಹದೊಂದಿಗೆ ಅಕ್ಷರ ದಾಸೋಹ ನೀಡಿದ ಪ್ರಯುಕ್ತ ಇಂದು ಸುಭಿಕ್ಷ ರಾಜ್ಯವಾಗಿದೆ. ಮಠಗಳಲ್ಲಿ 80 ಸಾವಿರಕ್ಕೂ ಹೆಚ್ಚು ಬಡ ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ, ಸಿದ್ದಗಂಗಾ ಮಠವೊಂದರಲ್ಲಿಯೇ 20 ಸಾವಿರಕ್ಕೂ ಹೆಚ್ಚು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಇದೊಂದು ಅದ್ಭುತ ಸಾಧನೆ ಎಂದು ಬಣ್ಣಿಸಿದರು.

ಶಿವಮೊಗ್ಗ ಕೃಷಿ ವಿ.ವಿ. ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿ, ಕೃಷಿ ವಿ.ವಿ. ಕುಲಸಚಿವ ಕೆ.ಸಿ.ಶಶಿಧರ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ರತ್ನ ಪ್ರಶಸ್ತಿ ಭೂಷಿತ ಕೆಎಂಎಫ್ ನಿರ್ದೇಶಕ ಬಿ.ಜಿ.ಬಸವರಾಜಪ್ಪ, ಪ್ರಗತಿಪರ ರೈತ ಮಹಿಳೆ ಕೆ.ಎಚ್.ಉಮಾಶೇಖರಪ್ಪ ಮತ್ತು ರೈತ ಮುಖಂಡ ಎಚ್.ಕೆ.ರಮೇಶ್ ಅವರುಗಳಿಗೆ ಗುರು ರಕ್ಷೆ ನೀಡಲಾಯಿತು.

ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠದ ಕಾರ್ಯದರ್ಶಿ ಚನ್ನಯ್ಯ ಬೆನ್ನೂರುಮಠ ಸ್ವಾಗತಿಸಿದರು. ನಿರ್ದೇಶಕ ಚನ್ನಬಸಯ್ಯ ನಿರೂಪಿಸಿದರು. ಶ್ರೀ ಅಭಿನೇತ್ರಿ ಡ್ಯಾನ್ಸ್ ಮ್ಯೂಸಿಕ್ ಅಕಾಡೆಮಿ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕವನ, ಕೆ.ತಿಮ್ಮಪ್ಪ, ಸುನಂದ ಅವರಿಂದ ಗಾಯನ ಕಾರ್ಯಕ್ರಮ ನಡೆಯಿತು.

## ಕಡೆಗೂ ಮರಳು ನೀತಿ ಜಾರಿ

(1ನೇ ಪುಟದಿಂದ) ಪರಿಶಿಷ್ಟ ಪಂಗಡ, ವಿಕಲಚೇತನ ಮತ್ತು ಇತರೆ ಸಾಮಾನ್ಯ ವರ್ಗದವರಿಗೆ ರೋಸ್ಟರ್ ಪದ್ಧತಿಯಡಿ ಮೀಸಲಾತಿ ಕಲ್ಪಿಸಲಾಗಿದೆ.

ಈ ಉನ್ನತ ಶ್ರೇಣಿಯ ಮರಳಿಗೆ ರಾಜ್ಯಾದ್ಯಂತ ಪ್ರತಿ ಮೆಟ್ರಿಕ್ ಟನ್ ಮರಳಿಗೆ 850 ರೂ. ನಿಗದಿ ಪಡಿಸಲಾಗಿದೆ.

ಸರ್ಕಾರ ನಿಗದಿ ಪಡಿಸುವ ಮಾರಾಟ ಬೆಲೆ ಮೊತ್ತದ ಶೇ. 50ರಷ್ಟನ್ನು ಮಾರಾಟ ಬೆಲೆ ಎಂಬುದಾಗಿ ಹಾಗೂ ಇದರಲ್ಲಿ ಶೇ. 60ರಷ್ಟನ್ನು ಕಟ್‌ಆಫ್ ಬೆಲೆಯೆಂದು ನಿಗದಿ ಪಡಿಸಲಾಗಿರುತ್ತದೆ.

ಸೆಲ್ಲಿಂಗ್ ಮತು ಕಟ್‌ಆಫ್ ಬೆಲೆಗೆ ಸಮನಾದ ಅಥವಾ ನಡುವೆ ಸಲ್ಲಿಸುವ ಕಡಿಮೆ ಟೆಂಡರ್ ಮೊತ್ತ ನಮೂದಿಸುವವರಿಗೆ ಯಶಸ್ವಿ ಬಿಡ್‌ದಾರರೆಂದು ಪರಿಗಣಿಸಲಾಗುವುದು.

ಒಂದಕ್ಕಿಂತ ಹೆಚ್ಚು ಟೆಂಡರ್‌ದಾರರು ಏಕರೂಪ ಟೆಂಡರ್ ದರ ನಮೂದಿಸಿದಲ್ಲಿ ಲಾಟರಿ ಮೂಲಕ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡಲಾಗುವುದು.

ಗುತ್ತಿಗೆ ಪ್ರಕ್ರಿಯೆಯನ್ನು ಇ-ಪೋರ್ಟಲ್‌ನಲ್ಲಿ ಆಸಕ್ತ ವ್ಯಕ್ತಿ ಇಲ್ಲವೇ ಖಾಸಗಿ ಕಂಪನಿಗಳವರು ಅರ್ಜಿ ಸಲ್ಲಿಸಲು ಜಿಲ್ಲಾವಾರು ಅಧಿಸೂಚನೆ ಜಾರಿ ಮಾಡಲಾಗುವುದು.

ಇಂದಿನಿಂದಲೇ ಜಿಲ್ಲಾಧಿಕಾರಿಗಳು ಹೊಸ ನೀತಿಯಡಿ ಮರಳು ಗುತ್ತಿಗೆ ನೀಡಿ ಗ್ರಾಹಕರಿಗೆ ಸರ್ಕಾರ ನಿಗದಿ ಪಡಿಸಿದ ದರದಲ್ಲಿ ಮಾರಾಟ ಮಾಡಬಹುದು ಎಂದು ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ಬಾವಿಗೆ ಬಿದ್ದಿದ್ದ ಹಸು ರಕ್ಷಿಸಿದ ಅಗ್ನಿಶಾಮಕ ದಳ



ದಾವಣಗೆರೆ, ಡಿ.3- ಇಲ್ಲಿನ ಆವರಗೆರೆಯ ಗುಂಡಿ ಮಹದೇವಪ್ಪ ಅವರ ಸಮಾಧಿ ತೋಟದಲ್ಲಿ ಬಾವಿಗೆ ಬಿದ್ದಿದ್ದ ಹಸುವನ್ನು ಅಗ್ನಿಶಾಮಕ ಮತ್ತು ತುರ್ತುಸೇವಾ ಠಾಣೆಯ ಸಿಬ್ಬಂದಿ ಮಂಗಳವಾರ ರಕ್ಷಿಸಿದ್ದಾರೆ.

ಗುಂಡಿ ಪುಷ್ಪಾ ಸಿದ್ದೇಶ್ ಅವರಿಗೆ ಸೇರಿದ ಎಚ್‌ಎಫ್ ತಳಿಯ ಹಸು ತೋಟದಲ್ಲಿ ಹುಲ್ಲು ಮೇಯುತ್ತಿತ್ತು. ಬಾವಿಯ ಪಕ್ಕದಲ್ಲಿದ್ದಾಗ ಆಯತಪ್ಪಿ ನೀರಿಗೆ ಬಿದ್ದಿತ್ತು. ಮೇಲೆ ಬರಲು ಸಾಧ್ಯವಾಗದೇ ಪರದಾಡುತ್ತಿದ್ದ ಹಸುವಿನ ಬಗ್ಗೆ ತೋಟದ ಕೆಲಸಗಾರರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದರು.

ಸ್ಥಳಕ್ಕೆ ತೆರಳಿದ ಸಹಾಯಕ ಅಗ್ನಿಶಾಮಕ ಅಧಿಕಾರಿ ಭೀಮರಾವ್ ಉಪ್ಪಾರ ನೇತೃತ್ವದ ಅಗ್ನಿಶಾಮಕ ಸಿಬ್ಬಂದಿ ಹಸು ಮೇಲೆತ್ತುವ ಕಾರ್ಯಾಚರಣೆ ನಡೆಸಿದರು. ನೀರಿಗೆ ಇಳಿದು ಹಗ್ಗ ಕಟ್ಟಿ ಹಸುವನ್ನು ಮೇಲೆ ಎತ್ತುವಲ್ಲಿ ಯಶಸ್ವಿಯಾದರು.

ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಸಿಬ್ಬಂದಿಗಳಾದ ಟಿ.ಸಿ. ನಾಗರಾಜ್, ಎಚ್.ಅಶೋಕ ನಾಯ್ಕ, ಜಿ.ಪ್ರಜ್ವಲ್, ಮಹಾಂತೇಶ್ ಮಲ್ಕಣ್ಣ ಪಾಲ್ಗೊಂಡಿದ್ದರು.

## ಪುರಾವೆ ದೊರೆತಿವೆ

(1ನೇ ಪುಟದಿಂದ) ಸಾಕ್ಷ್ಯಾಧಾರಗಳು ಪತ್ತೆಯಾಗಿವೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ಸಿದ್ದರಾಮಯ್ಯ ಅವರ ಆಪ್ತ ಸಹಾಯಕರಲ್ಲಿ ಒಬ್ಬರಾದ ಎಸ್ ಜಿ ದಿನೇಶ್ ಕುಮಾರ್ ಅಲಿಯಾಸ್ ಸಿ ಟಿ ಕುಮಾರ್ ಅವರು ಈ ಪ್ರಕ್ರಿಯೆಯಲ್ಲಿ ಅನಗತ್ಯ ಪ್ರಭಾವ ಬೀರಿದ್ದಾರೆ ಎಂಬುದಕ್ಕೆ ಪುರಾವೆಗಳು ಸಿಕ್ಕಿವೆ ಎಂದು ಇಡಿ ಹೇಳಿಕೊಂಡಿದೆ.

ಮುಡಾದಲ್ಲಿ ಆಪಾದಿತ ಅಕ್ರಮ ಚಟುವಟಿಕೆಗಳು ಪಾರ್ವತಿ ಪ್ರಕರಣದೊಂದಿಗೆ ಕೊನೆಗೊಂಡಿಲ್ಲ. 700 ಕೋಟಿ ರೂ.ಗಿಂತ ಹೆಚ್ಚು ಮಾರುಕಟ್ಟೆ ಮೌಲ್ಯದ ಒಟ್ಟು 1,095 ಸೈಟ್‌ಗಳನ್ನು 'ಕಾನೂನು ಬಾಹಿರವಾಗಿ' ಹಂಚಿಕೆ ಮಾಡಲಾಗಿದೆ ಎಂದು ಇಡಿ ತನಿಖಾ ವರದಿ ಮತ್ತು ಅಧಿಕೃತ ಮೂಲಗಳು ತಿಳಿಸಿರುವುದಾಗಿ ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

## ಮೀಸಲಾತಿ : ಇಂದು ಸಭೆ

ಅಖಿಲ ಭಾರತ ಲಿಂಗಾಯತ ಪಂಚಾಮಸಾಲಿ ಸಮಾಜ, ಕೂಡಲ ಸಂಗಮ ಗುರುಪೀಠ, ದಾವಣಗೆರೆ ಜಿಲ್ಲೆ 2ಎ ಮೀಸಲಾತಿಗಾಗಿ ಬೆಳಗಾವಿ ಸುವರ್ಣ ವಿಧಾನಸೌಧ ಮುತ್ತಿಗೆ ಹಾಗೂ ಬೆಳಗಾವಿ ಚಲೋ ಉದ್ದೇಶದಿಂದ ಪೂರ್ವಭಾವಿ ಸಭೆಯನ್ನು ಶಾಸಕ ಹೆಚ್.ಎಸ್. ಶಿವಶಂಕರ್‌ರವರ ಸ್ವಗೃಹದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಕರೆಯಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಫ್-08 ಎರೆಕುಪ್ಪಿ ಎನ್.ಜೆ.ವೈ, ಎಫ್-10 ಅಸುಂಡಿ ಐ.ಪಿ, ಎಫ್-13 ಕೆವಿಕೆ ಎನ್.ಜೆ.ವೈ , ಎಫ್-14 ಕೂನಬೇವು ಐ.ಪಿ, ಎಫ್-01 ಕುದರಿಹಾಳ ಐ.ಪಿ, ಎಫ್-03 ನೂಕಾಪುರ, ಎಫ್-04 ಚಿಕ್ಕಹರಳಹಳ್ಳಿ, ಎಫ್-09 ಹೊನ್ನತ್ತಿ ಐ.ಪಿ, ಎಫ್-10 ಯಲ್ಲಾಪುರ ಐ.ಪಿ, ಎಫ್-11 ಹನುಮಾಪುರ ಐ.ಪಿ ಮತ್ತು ಎಫ್-12 ಹೊನ್ನತ್ತಿ ಎನ್.ಜೆ.ವೈ ಫೀಡರ್‌ಗಳ ಗ್ರಾಮೀಣ ಭಾಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ವಕ್ಫ್ ರದ್ದುಗೊಳಿಸುವಂತೆ ಯತ್ನಾಳ್ ಬಣದ ಮನವಿ



ಮಲೇಬೆನ್ನೂರು, ಡಿ.3- ನವದೆಹಲಿಯಲ್ಲಿ ಬೀಡು ಬಿಟ್ಟಿರುವ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ ಬಣದವರು ಮಂಗಳವಾರ ಸಂಸದೀಯ ಜಂಟಿ ಸದನ ಸಮಿತಿಯ ಅಧ್ಯಕ್ಷರಾದ ಜಗದಾಂಬಿಕ ಪಾಲ್ ಅವರನ್ನು ಭೇಟಿ ಮಾಡಿ ವಕ್ಫ್ ಕಾಯ್ದೆ ರದ್ದುಪಡಿಸುವಂತೆ ಮನವಿ ಪತ್ರ ಸಲ್ಲಿಸಿದ್ದಾರೆ.

ಈ ವಿಷಯವನ್ನು 'ಜನತಾವಾಣಿ'ಗೆ ತಿಳಿಸಿದ ಹರಿಹರ ಶಾಸಕ ಬಿ.ಪಿ. ಹರೀಶ್ ಅವರು, ವಕ್ಫ್ ಕಾಯ್ದೆಯಿಂದ ಆಗುತ್ತಿರುವ ತೊಂದರೆ ಹಾಗೂ ಗೊಂದಲಗಳ ಬಗ್ಗೆ ಸಂಸದೀಯ ಜಂಟಿ ಸದನ ಸಮಿತಿಯ ಅಧ್ಯಕ್ಷರ ಜೊತೆ ಸುದೀರ್ಘವಾಗಿ ಚರ್ಚೆ ಮಾಡಿ, ಕಾಯ್ದೆ ರದ್ದು ಮಾಡುವಂತೆ ಮನವಿ ಮಾಡಿದ್ದೇವೆ ಎಂದರು. ಮಾಜಿ ಸಂಸದರಾದ ಜಿ.ಎಂ. ಸಿದ್ದೇಶ್ವರ, ಭಗವಂತ ನಾಯಕ, ಶಾಸಕ ರಮೇಶ್ ಜಾರಕಿಹೊಳಿ, ಮಾಜಿ ಸಚಿವರಾದ ಅರವಿಂದ ಲಿಂಭಾವಳಿ, ಕುಮಾರ್ ಬಂಗಾರಪ್ಪ, ಮಾಜಿ ಸಂಸದ ಭಗವಂತ ನಾಯಕ, ಸಂತೋಷ್, ಜಿ.ಎಸ್. ಅನಿತ್ ಮತ್ತಿತರರು ಈ ನಿಯೋಗದಲ್ಲಿದ್ದರೆಂದು ಹರೀಶ್ ತಿಳಿಸಿದರು.

### ಆರ್ಯವೈಶ್ಯ ಮಹಾಸಭಾದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ

## ನಗರದ ಮಯೂರ್, ಅಖಿಲ್‌ಗೆ ಪುರಸ್ಕಾರ



ದಾವಣಗೆರೆ, ಡಿ. 3- ಬೆಂಗಳೂರು ಕರ್ನಾಟಕ ಆರ್ಯವೈಶ್ಯ ಮಹಾಸಭಾದಿಂದ ಕಳೆದ ವಾರ ನಡೆದ 14ನೇ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಎಂಬಿಎ ಹಾಗೂ ಬಿಕಾಂನಲ್ಲಿ ಡಿಸ್ಟಿಂಕ್ಷನ್ ಪಡೆದ ಕೆ. ಮಯೂರ್ ಹಾಗೂ ಬಿ.ಆರ್. ಅಖಿಲ್ ಅವರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ರಾಜ್ಯ ಅಧ್ಯಕ್ಷ ರವಿಶಂಕರ್ ಹಾಗೂ ದಾವಣಗೆರೆ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ನಗದು ಪುರಸ್ಕಾರ ನೀಡಿ ಗೌರವಿಸಿದರು.

ಮಯೂರ್, ನಗರದ ಹಿರಿಯ ಪತ್ರಿಕಾ ವಿತರಕ ಎ.ಎನ್. ಕೃಷ್ಣಮೂರ್ತಿ ಅವರ ಪುತ್ರ ಹಾಗೂ ಬಿ.ಆರ್. ಅಖಿಲ್, ಬಿ.ಎಸ್. ರಮೇಶ್ ಬಾಬು ಅವರ ಪುತ್ರ.

ವಿದ್ಯಾರ್ಥಿಗಳು ದಿನಪತ್ರಿಕೆ ವಿತರಣೆ ಮಾಡುವುದರ ಜೊತೆಗೆ ವಿದ್ಯಾಭ್ಯಾಸ ಮಾಡಿ ಸಾಧನೆ ಮಾಡಿದ್ದಾರೆ. ಇವರಿಗೆ ದಾವಣಗೆರೆ ಪತ್ರಿಕಾ ವಿತರಕರ ಸಂಘದ ಪದಾಧಿಕಾರಿಗಳು ಅಭಿನಂದಿಸಿರುತ್ತಾರೆ.

## ಹೊಸಳ್ಳಿ ಗ್ರಾಮದ ನೀರಿನ ಬವಣೆ ಹೋಗಲಾಡಿಸಿ



ದಾವಣಗೆರೆ, ಡಿ. 3 - ತಾಲ್ಲೂಕಿನ ಗುಡಾಳ್ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಹೊಸಳ್ಳಿ ಗ್ರಾಮದ ಜನರ ಅನುಕೂಲಕ್ಕಾಗಿ ಹೊಸಳ್ಳಿ ಗ್ರಾಮದ ಜನರಿಗೆ ಆಶ್ರಯ ಯೋಜನೆಯಲ್ಲಿ ಕಾಯ್ದಿರಿಸಿದ ಜಾಗದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಿಲ್ಲಾ ಪಂಚಾಯತ್ ದಾವಣಗೆರೆ ವತಿಯಿಂದ 2012-13ನೇ ಸಾಲಿನಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣಗೊಂಡಿರುತ್ತದೆ.

ಈ ಓವರ್ ಹೆಡ್ ಟ್ಯಾಂಕ್‌ಗೆ ಸುಮಾರು ಒಂದು ಕಿ.ಮೀ. ದೂರದಿಂದ ಬೋರ್‌ವೆಲ್ ಮೂಲಕ ಟ್ಯಾಂಕ್ ತುಂಬಿಸಲು ಪೈಪ್‌ಲೈನ್ ಅಳವಡಿಸಲಾಗಿದೆ. ಅದಕ್ಕಾಗಿ ಸರ್ಕಾರ ಲಕ್ಷಾಂತರ ರೂಪಾಯಿಗಳು ಖರ್ಚು ಮಾಡಿ ಟ್ಯಾಂಕ್ ನಿರ್ಮಿಸಿದೆ.

ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಟ್ಯಾಂಕ್ ತುಂಬಿಸಿ, ಗ್ರಾಮಕ್ಕೆ ನೀರು ಬಿಡುತ್ತಿಲ್ಲ. ನೀರು ಬಿಡುವ ನೌಕರ ಬೋರ್‌ವೆಲ್‌ನಿಂದ ನೇರವಾಗಿ ಗ್ರಾಮಕ್ಕೆ ನೀರು ಬಿಡುವ ಪದ್ಧತಿ ಮಾಡಿಕೊಂಡಿರುತ್ತಾರೆ.

ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿದ ಟ್ಯಾಂಕ್‌ನಿಂದ ಏನೂ ಪ್ರಯೋಜನವಾಗುತ್ತಿಲ್ಲ.

ವಿದ್ಯುತ್ ನಷ್ಟ, ಪದೇ ಪದೇ ಮೋಟರ್ ಸುಟ್ಟುಹೋಗುವುದು ಮತ್ತು ಇತ್ಯಾದಿ ಸಮಸ್ಯೆಗಳು ಪದೇ ಪದೇ ಬರುತ್ತಲೇ ಇರುತ್ತವೆ.

ಈ ಗ್ರಾಮಕ್ಕೆ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಸುಮಾರು 90 ಮನೆಗಳಿಗೆ ನೀರಿನ ನಳ ಅಳವಡಿಸಲಾಗಿದೆ. ಆದರೆ ಯಾವ ಮನೆಗೂ ನೀರು ಬರುವುದಿಲ್ಲ. ಸುಮಾರು 34 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಮಾಡಲಾಗಿದೆಯಾದರೂ ಎಲ್ಲಾ ಕಳಪೆ ಕಾಮಗಾರಿ ಆಗಿದೆ ಎಂದು ಗ್ರಾಮದ ಜನರು ಬೇಸರ ವ್ಯಕ್ತಪಡಿಸಿರುತ್ತಾರೆ.

ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ

## ವೀರಶೈವ ಮಹಾಸಭೆ ಜಿಲ್ಲಾ ಗೌರವಾಧ್ಯಕ್ಷರಾಗಿ ಉಳುವಯ್ಯ



(1ನೇ ಪುಟದಿಂದ) ಮಹಾಸಭಾದ ರಾಷ್ಟ್ರ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರ ಶಿಫಾರಸ್ಸಿನ ಮೇರೆಗೆ ಮಹಾಸಭಾದ ಜಿಲ್ಲಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್ ಈ ನೇಮಕ ಮಾಡಿದ್ದಾರೆ.

## ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಚನ್ನಗಿರಿ

ಚನ್ನಗಿರಿ,ಡಿ.2- ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ 100 ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ 25 ಸಾವಿರ ರೂ.ಗಳಂತೆ ಶಿಷ್ಯವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ತಾಲ್ಲೂಕಿನ ವ್ಯಾಪ್ತಿಯ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಯನ್ನು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಚನ್ನಗಿರಿ, ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. ಸಂ:08022261789 ಹಾಗೂ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಚನ್ನಗಿರಿ (9945514253) ಸಂಪರ್ಕಿಸಬಹುದು.

### ಸಲ್ಲಳ್ಳಿ ಮಹಾದೇವಮ್ಮ ನಿಧನ



ದಾವಣಗೆರೆ ಸಿಟಿ ಬಾರ್‌ಲೈನ್ ರೋಡ್ ಚಲವಾದಿ ಕೇರಿ ವಾಸಿಯಾದ ದಿ. ಸಲ್ಲಳ್ಳಿ ಶಿವಪ್ಪನವರ ಧರ್ಮಪತ್ನಿ ಸಲ್ಲಳ್ಳಿ ಮಹಾದೇವಮ್ಮ (73) ಇವರು ದಿನಾಂಕ : 03.12.2024ರ ಮಂಗಳವಾರ ಮಧ್ಯಾಹ್ನ 4.20ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.12.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಬೂದಾಳು ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


॥ ಶ್ರೀ ಕೊಕ್ಕನೂರು ಆಂಜನೇಯ ಸ್ವಾಮಿ ಪ್ರಸನ್ನ ॥ ॥ ಶ್ರೀ ಉಚ್ಚಂಗೆಮ್ಮದೇವಿ ಕೃಪೆ ॥

## ಕೈಲಾಸ ಸಮಾರಾಧನೆ ಆಹ್ವಾನ



ಹರಿಹರ ತಾಲ್ಲೂಕು ಹಿರೇಹಾಲಿವಾಣ ಗ್ರಾಮದ ವಾಸಿ

**ಶ್ರೀಮತಿ ಕಮಲಮ್ಮ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 22.11.2024ನೇ ಶುಕ್ರವಾರ ಮುಂಜಾನೆ 02.15ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಜಿ. ಕೆಂಚಪ್ಪ**

ನಿವೃತ್ತ ಶಿಕ್ಷಕರು

ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧ'ನೆಯನ್ನು**

ದಿನಾಂಕ : 04.12.2024ನೇ ಬುಧವಾರ ಬೆಳಿಗ್ಗೆ 10.15 ರಿಂದ 11.00 ಘಂಟೆಗೆ ಮೃತರ ಸ್ವಗೃಹ ಹರಿಹರ ತಾ॥ ಹಿರೇಹಾಲಿವಾಣ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಗುಡ್ಡದ ತುಮ್ಮಿನಕಟ್ಟೆ ಮತ್ತು ಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು, ಹಿರೇಹಾಲಿವಾಣ.**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ನಗರದಲ್ಲಿ ಇಂದು ಅನುದಾನಿತ ಪ.ಪೂ. ಕಾಲೇಜು ನೌಕರರ ಸಂಘದ ಉದ್ಘಾಟನೆ

ದಾವಣಗೆರೆ, ಡಿ.3- ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದ ಜಿಲ್ಲಾ ಘಟಕದ ಉದ್ಘಾಟನೆ ಹಾಗೂ ವಿಭಾಗೀಯ ಮಟ್ಟದ ಸಮಾವೇಶವನ್ನು ನಾಳೆ ದಿನಾಂಕ 4ರ ಬುಧವಾರ ಅಥಣಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾಗರಾಜ್ ಎಸ್.ಜಿ. ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪ ನಿರ್ದೇಶಕರು ಆಗಮಿಸಲಿದ್ದಾರೆ.

ಸಂಘದ ರಾಜ್ಯಾಧ್ಯಕ್ಷ ಹೆಚ್.ಚಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಘಟಕದ ಗೌರವಾಧ್ಯಕ್ಷ ಪ್ರದೀಪ್ ಕುಮಾರ್ ಎಸ್., ಅಧ್ಯಕ್ಷ ಚಂದ್ರಪ್ಪ ಹೆಚ್., ಕಾರ್ಯಾಧ್ಯಕ್ಷ ಜೆ.ಶಿವಪ್ಪ, ಪ್ರಧಾನ ಕಾರ್ಯದರ್ಶಿ ಮಲ್ಲೇಶಪ್ಪ ಎಂ.ಬಿ, ಕೋಶಾಧ್ಯಕ್ಷ ಮಧುಕುಮಾರ್ ಎಸ್.ಬಿ., ಸಹ ಕಾರ್ಯದರ್ಶಿ ದಯಾನಂದ ಡಿ. ಉಪಸ್ಥಿತರಿದ್ದರು.

# ಜಿಗಳಿ - ಜಿ. ಬೇವಿನಹಳ್ಳಿ ಗ್ರಾಮಗಳ ಗಡಿ ನಿಗದಿ




ಜಿಗಳಿ : ಗ್ರಾ.ಪಂ. ಗ್ರಾಮ ಸಭೆಯಲ್ಲಿ ತೀರ್ಮಾನ

ಮಲೇಬೆನ್ನೂರು, ಡಿ.3- ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ 2024-25ನೇ ಸಾಲಿನ ವಾರ್ಡ್ ಸಭೆ ಹಾಗೂ ಗ್ರಾಮ ಸಭೆ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.

ಗ್ರಾಮ ಸಭೆಯಲ್ಲಿ 2025-26ನೇ ಸಮಗ್ರ ವಾರ್ಷಿಕ ಕ್ರಿಯಾ ಯೋಜನೆ ಕುರಿತು ಮತ್ತು ತೆರಿಗೆಯನ್ನು ಸಕಾಲದಲ್ಲಿ ಗ್ರಾ.ಪಂ.ಗೆ ಪಾವತಿಸುವ ಬಗ್ಗೆ ಹಾಗೂ ಜಿಗಳಿ, ಜಿ. ಬೇವಿನಹಳ್ಳಿ ಗ್ರಾಮಗಳ ಗಡಿ ನಿಗದಿಪಡಿಸುವ ಬಗ್ಗೇ ಸುದೀರ್ಘವಾಗಿ ಚರ್ಚಿಸಲಾಯಿತು.

ಗ್ರಾಮದ ನಿಟ್ಟುವಳ್ಳಿ ಕರಿಬಸಪ್ಪ ಅವರು, ರುದ್ರಗೌಡದ ವೃತ್ತದಲ್ಲಿರುವ ಹೈಮಾಸ್ಟ್ ದೀಪವನ್ನು ಸರಿಪಡಿಸುವಂತೆ ಮತ್ತು ಚೌಡೇಶ್ವರ ದೇವಸ್ಥಾನಕ್ಕೆ ವಿದ್ಯುತ್ ಸಂಪರ್ಕ ಹಾಗೂ ರಸ್ತೆಗೆ ಬೀದಿ ದೀಪಗಳನ್ನು ಹಾಕುವಂತೆ, ಕೆರೆ ನೀರು ಖಾಲಿ ಮಾಡಿ, ಹೊಸ ನೀರು ತುಂಬಿಸಲು ಮನವಿ ಮಾಡಿದರು.

ಈ ವೇಳೆ ಎಸಿಡಿಪಿಓ ಶ್ರೀಮತಿ ಶೈಲಾ ಅವರು, ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿಯ ರಚನೆ ಹರೀಶ್, ಸಿ.ಎನ್. ಪರಮೇಶ್ವರಪ್ಪ, ಪಿಡಿಓ ಕೆ.ಎಸ್. ಉಮೇಶ್, ಕಾರ್ಯದರ್ಶಿ ಶ್ರೀಮತಿ ಸುಜಾತ, ಎಸ್‌ಡಿಎ ಬಿ. ಮೌನೇಶ್, ಬಸವರಾಜಯ್ಯ, ಮುತ್ತು ಮತ್ತು ಆರೋಗ್ಯ ಇಲಾಖೆಯ ತಿಪ್ಪೇಸ್ವಾಮಿ, ಪತ್ರಕರ್ತ ಪ್ರಕಾಶ್, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಜಿ. ಬೇವಿನಹಳ್ಳಿ, ಬ. ಬಸಾವಪುರ ಮತ್ತು ಜಿಗಳಿಯಲ್ಲಿ ವಾರ್ಡ್ ಸಭೆಗಳನ್ನು ನಡೆಸಲಾಗಿತ್ತು.



ದಾವಣಗೆರೆ ಹಳೆ ಊರಿನ ಚಳಿಗಾಲದ ಸ್ವಾರಸ್ಯಗಳು...

ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು, ನೆನಪುಗಳು

# ಬಿಸಿಲು V/s ಚಳಿ ಕಾಯಿಸುವುದು??

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಹಳೆ ಊರಿನ ಹಳೆ ಕಾಲದ ಗಣೇಶೋತ್ಸವ, ದೀಪಾವಳಿ, ಗೌರಿ ಆರತಿಯ ಕೆಲ ಸ್ವಾರಸ್ಯಗಳನ್ನು ಹೇಳಿದೆ. ಈಗ ಚಳಿಗಾಲದ ಕೆಲ ಸ್ವಾರಸ್ಯಗಳನ್ನು ಹೇಳುವೆ.

ಹರಿಹರದ ನಾಗಪ್ಪನವರು ಅಂದರೆ ನಾಗೋಸಾ ಲದ್ವಾರವರು ಉಪಾಧ್ಯಾಯ ವೃತ್ತಿಯನ್ನು ಬಿಟ್ಟು, ಜವಳಿ ವ್ಯಾಪಾರವನ್ನು ಮಾಡಲು ದಾವಣಗೆರೆಯ ಚೌಕಿಪೇಟೆಗೆ ಬಂದು ನೆಲೆಸಿದವರು.

ಇವರು ಹರಿಹರದ ಶ್ರೀ ಹನುಮಾನ್ ಮೋಟಾರ್ ಸರ್ವಿಸ್‌ನ ಹಿರಿಯ ಲದ್ವಾರವರ ತಮ್ಮನವರು.

ದಾವಣಗೆರೆ ನಗರಪಾಲಿಕೆ ಸದಸ್ಯೆಯವರಾಗಿದ್ದ ಸೋನಾ ಬಾಯಿ ರಂಗನಾಥ್‌ರವರ ಮಾವನವರು. ಅನೇಕ ದಶಕಗಳ ಹಿಂದೆ ಚೌಕಿಪೇಟೆಯಲ್ಲಿ ಇವರದು ಸೊಲ್ಲಾಪುರದ 'ಲಕ್ಷ್ಮಿ ಅಂಡ್ ವಿಷ್ಣು ಮಿಲ್ಸ್‌ನ ಉತ್ಪನ್ನಗಳ ಮಾರಾಟ ಅಂಗಡಿ ಇತ್ತು. ಇದನ್ನು ನಗರಸಭೆ ಅಧ್ಯಕ್ಷರಾಗಿದ್ದ ಸಿ. ಕೇಶವಮೂರ್ತಿ ಉದ್ಘಾಟನೆ ಮಾಡಿದ್ದರು. ದಾವಣಗೆರೆ ಚೌಕಿಪೇಟೆಯಲ್ಲಿ ನಾಗಪ್ಪನವರ ಮನೆ ಹಾಗೂ ಅಂಗಡಿ ದಕ್ಷಿಣಾಭಿಮುಖವಾಗಿದ್ದು, ಚಳಿಗಾಲದಲ್ಲಿ ಬಿಸಿಲು ಉತ್ತರದ ಕಡೆಗೆ ಇರುತ್ತದೆ. ನಾಗಪ್ಪನವರು ಒಂದು ದಿನ ಚಳಿಗಾಲದ ಬೆಳಿಗ್ಗೆ ತಮ್ಮ ಎದುರು ಅಂಗಡಿಯ ಸಂಘವಿ ಹೀರಾಚಂದ್ ರಾಯಚಂದ್ ಕಟ್ಟೆಯ ಬಳಿ ಬಂದು ಕೂತರು. 'ಏನ್ ನಾಗಪ್ಪೋರೇ, ಬಿಸಿಲು ಕಾಯಿಸಕ್ಕೆ ಬಂದ್ರಾ?' ಎಂದು ಹೀರಾಚಂದ್ ಕೇಳಿದರು. 'ಬಿಸಿಲು ಬಿಸೀನೇ ಇರುತ್ತೆ, ಅದನ್ನು ಇನ್ನೇನ್ ಕಾಯಿಸೋದು, ಮೈ ಕಾಯಿಸಕ್ಕೆ ಬಂದೆ' ಎಂದು ನಾಗಪ್ಪ ನಗುತ್ತಾ ಹೇಳಿದರು.

'ಮೈಯ್ಯಾಗೆ ಕಾವು ಇದ್ದೇ ಇರುತ್ತೆ, ಅದು ಹೋದ್ರೆ ಸತ್ತೋಗ್ತೀವಿ, ಅದುನ್ನ ಮತ್ತೇನ್ ಕಾಯಿಸೋದು?' ಎಂದು ತಮಾಷೆ ಮಾಡಿದರು ರಾಯಚಂದಜೀ. ಹಾಗಾದರೆ ಹೇಗೆ ಹೇಳುವುದು ಸೂಕ್ತ ? ಎಂದು ಅವರವರಲ್ಲಿ ಜಿಜ್ಞಾಸೆ ಶುರುವಾಯಿತು. ನಮ್ಮ ಅಣ್ಣ 'ಹೆಚ್. ಆನಂದರಾಮ ಶಾಸ್ತ್ರೀ ಆಗ ಶಾಲಾ ಬಾಲಕ. ಸಿಂಡಿಕೇಟ್ ಬ್ಯಾಂಕಿನ ಹಿರಿಯ ಪ್ರಬಂಧಕರಾಗಿ ಸ್ವಯಂ ನಿವೃತ್ತಿ ಪಡೆದು, ಪ್ರಸ್ತುತ ಇವರು ಬೆಂಗಳೂರಿನಲ್ಲಿ ನೆಲೆಸಿದ್ದು, ಹಿರಿಯ ಪತ್ರಿಕಾ ಅಂಕಣಕಾರರು, ವಿಮರ್ಶಕರು, ಬರಹಗಾರ, ಚಿಂತಕರಾಗಿ ಖ್ಯಾತರಾಗಿದ್ದಾರೆ. 'ಆನಂದ್ ರಾಮ್ ನೀನ್ ಬಾಳ ಬುದ್ಧಿವಂತ, ಎಲ್ಲಾ ಓದ್ಕೊಂಡಿರ್ತಿ, ತಿಳ್ಕೊಂಡಿರ್ತಿ, 'ಬಿಸಿಲು ಕಾಯಿಸುವುದು' ಅಂದ್ರೂ ಸರಿಯಲ್ಲ, 'ಮೈ ಕಾಯಿಸೋದು' ಅಂದ್ರೂ ಸರಿ ಅಲ್ಲ, ಹಂಗಾದ್ರೆ ಏನು ಹೇಳಬೇಕು, ಯಾವುದು ಸರಿ? ನೀನೇ ಹೇಳಪ್ಪ" ಎಂದು ಕೇಳಿದರು ಹೀರಾಚಂದ್. ನಮ್ಮ ಅಣ್ಣ ಹೇಳಿದರು, 'ಚಳಿಗಾಲದಲ್ಲಿ ಸಾಮಾನ್ಯವಾಗಿ ಮೈಗೆ ಚಳಿ ಹಿಡಿದಿರುತ್ತದೆ, ಅದನ್ನು ಕಾಯಿಸುವುದು. ಹಾಗಾಗಿ 'ಚಳಿ ಕಾಯಿಸುವುದು' ಎನ್ನಬಹುದು ಎಂದರು. ಪ್ರಸಿದ್ಧ ಜವಳಿ ಅಂಗಡಿ ಗೌಡರ ಗಂಗಾಧರಪ್ಪ ಮಹಾಲಿಂಗಪ್ಪನವರಲ್ಲಿ ಗುಮಾಸ್ತಿಕೆ ಮಾಡುತ್ತಿದ್ದ ಕಾಯಿಪೇಟೆಯ ಸ್ವಾಮಿಯವರು ನಡುವೆ ಬಾಯಿ ಹಾಕಿ 'ಹಂಗಾದ್ರೆ' ಮೈಚಳಿ ಬಿಡಿಸುವುದು 'ಅಂತ ಹೇಳಬಹುದಲ್ಲ' ಎಂದರು.

ಅದಕ್ಕೆ ನಮ್ಮ ಅಣ್ಣ ನಗುತ್ತಾ 'ಸ್ವಾಮ್ಯೋರೇ 'ಮೈಚಳಿ ಬಿಡಿಸುವುದು' ಎಂದರೆ ಹೊಡೆಯುವುದು ಎಂದಾಗುತ್ತದೆ. ಇನ್ನೂ ಚರ್ಚಿಸಿ ಈ ವಿಷಯದ ಕಾವು ಏರಿಸುವುದು ಬೇಡ, ಚಳಿ ಕಾಯಿಸಿದರೆ ಸಾಕು' ಎಂದರು. 'ಹೌದು' ಎಂದು ನಗುತ್ತಾ ಎಲ್ಲರೂ ತಲೆ ಹಾಕಿದರು.

## ಸ್ಮಾರ್ಟ್ ಸಿಟಿ ಯೋಜನೆ ಯಶಸ್ವಿಗೆ ಸಾಕ್ಷಿಯಾದ ಪ್ರಶಸ್ತಿಗಳು







ದಾವಣಗೆರೆ, ನ. 3- ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಗಳ ಯಶಸ್ವಿನ ಫಲಶ್ರುತಿಗೆ ಇಲ್ಲಿಯವರೆಗೂ ಹತ್ತು ಪ್ರಶಸ್ತಿಗಳು ಲಭಿಸಿವೆ.

ಅದರಲ್ಲೂ ಕಳೆದ ಒಂದು ವರ್ಷದಲ್ಲಿ ನಾಲ್ಕು ಪ್ರಶಸ್ತಿಗಳು ದಾವಣಗೆರೆ ಸ್ಮಾರ್ಟ್ ಸಿಟಿ ಮುಡಿಗೇರಿದ್ದು ಸಂತಸದ ಸಂಗತಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಸ್ಮಾರ್ಟ್ ಸಿಟಿ ಅಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಕಳೆದ ಒಂದು ವರ್ಷದಲ್ಲಿ ಐಸಿಟಿ ಯೋಜನೆಯ ಯಶಸ್ವಿ ಮೂರು ರಾಷ್ಟ್ರಮಟ್ಟದ ಪ್ರಶಸ್ತಿಗಳಾದ ಐಎಂಎಫ್ 2.0 ಸೈಕಲ್ 1, ಪಬ್ಲಿಕ್ ಸೇಫ್ಟಿ ಇನ್ನೋವೇಷನ್, ಬೆಸ್ಟ್ ಸ್ಮಾರ್ಟ್ ಸಿಟಿ ಇನ್ಫ್ರಾಸ್ಟ್ರಕ್ಚರ್ ಲಭಿಸಿದೆ. ಕೆಎಸ್‌ಆರ್‌ಟಿಸಿ ಮುಖ್ಯ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಲ್ಟ್ರಾಟೆಕ್ ಕಂಪನಿಯಿಂದ ಕೊಡಲ್ಪಡುವ ಒಂದು ರಾಜ್ಯಮಟ್ಟದ ಔಟ್‌ಸ್ಟ್ಯಾಂಡಿಂಗ್ ಕಾಂಕ್ರೀಟ್ ಸ್ಟ್ರಕ್ಚರ್ ಆಫ್ ನಾರ್ಥ್ ಕರ್ನಾಟಕ (ಇನ್ಫ್ರಾ ಕೆಟಗೆರಿ) ಪ್ರಶಸ್ತಿ ಲಭಿಸಿರುವುದು ಸ್ಮಾರ್ಟ್ ಸಿಟಿಗೆ ಹೆಮ್ಮೆಯ ವಿಚಾರ ಎಂದರು.

ನಂತರ ಸ್ಮಾರ್ಟ್ ಸಿಟಿ ಕಾಮಗಾರಿಗಳ ಕುರಿತು ಚರ್ಚಿಸಿದ ಸಚಿವರು, ಬಾಕಿ ಉಳಿದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಸ್ಮಾರ್ಟ್ ಸಿಟಿ ಕಾರ್ಯಕ್ಕೆ ಪ್ರಶಸ್ತಿ ಬಂದಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಸ್ವತಂತ್ರ ನಿರ್ದೇಶಕ ಎಂ. ನಾಗರಾಜ್, ಪ್ರಧಾನ ವ್ಯವಸ್ಥಾಪಕ (ತಾಂತ್ರಿಕ) ಕೃಷ್ಣಪ್ರಸಾದ್ ಹೆಚ್.ಎನ್., ಡಿಜಿಎಂ -ಐಟಿ ಮಮತಾ, ಜಲವಾಹಿನಿ ಪಿಎಂಸಿ ಟೀಮ್ ಲೀಡ್ ಉಮಾಪತಿ ಹೊಂಬಣ್ಣ ಮತ್ತಿತರರಿದ್ದರು.

## ಒಡಿಶಾ : ನಾಟಕ ಮಾಡುವಾಗ ಜೀವಂತ ಹಂದಿ ಹೊಟ್ಟೆ ಸೀಳಿ ಮಾಂಸ ತಿಂದ ಪಾತ್ರದಾರಿ!

ಬಹರಾಂಪುರ್ (ಒಡಿಶಾ), ಡಿ.3- ಪಾತ್ರದಾರಿಯೊಬ್ಬ ವೇದಿಕೆಯಲ್ಲಿಯೇ ಜೀವಂತ ಹಂದಿ ಹೊಟ್ಟೆ ಸೀಳಿ ಹಸಿ ಮಾಂಸವನ್ನು ತಿಂದಿರುವ ಘಟನೆ ಒಡಿಶಾದ ಬಹರಾಂಪುರ್ ಜಿಲ್ಲೆಯಲ್ಲಿ ನಡೆದಿದೆ.

ಬಹರಾಂಪುರದ ಹಿಂಜಿ ಪೊಲೀಸ್ ಠಾಣೆಯ ರಾಲಾಬ್ ಎಂಬ ಹಳ್ಳಿಯಲ್ಲಿ ನವೆಂಬರ್ 24 ರಂದು ರಾಮಾಯಣಕ್ಕೆ ಸಂಬಂಧಿಸಿದ ನಾಟಕ ಮಾಡುವಾಗ ಈ ಘಟನೆ ನಡೆದಿದ್ದು, ರಾಕ್ಷಸ ಪಾತ್ರದಾರಿಯಾಗಿದ್ದ ಭೀಮಾಂಧರ್ ಗೌಡಾ ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ.

ರಾಲಾಬ್ ಹಳ್ಳಿಯ ಗ್ರಾಮಸ್ಥರು ಕಂಜೈನಾಲ್ ಯಾತ್ರಾ ಪ್ರಯುಕ್ತ ಗ್ರಾಮದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ನಾಟಕ ಆಯೋಜಿಸಿದ್ದರು. ಈ ವೇಳೆ ಭೀಮಾಂಧರ್ ಗೌಡಾ ಹಾಗೂ ಆತನ ಕೆಲ ಸಹಚರರು ಸಭಿಕರ ಮನ ಸೆಳೆಯುವ ಉದ್ದೇಶದಿಂದ ಕತ್ತಿಯಿಂದ ಹಂದಿಯನ್ನು ಕೊಂದು ಕ್ರೌರ್ಯ ಮೆರೆದಿದ್ದಾರೆ. ಅಲ್ಲದೇ ಅದೇ ವೇದಿಕೆಯಲ್ಲಿ ಜೀವಂತ ಹಾವುಗಳನ್ನು ಪ್ರದರ್ಶಿಸಿ ಅನೇಕರಿಗೆ ಭಯ ಹುಟ್ಟಿಸಿದ್ದರು ಎಂದು ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿ ಮಾಧ್ಯಮದವರಿಗೆ ತಿಳಿಸಿದ್ದಾರೆ.

ಈ ವಿಚಾರ ಸದ್ಯ ನಡೆಯುತ್ತಿರುವ ಒಡಿಶಾ ವಿಧಾನಸಭೆ ಕಲಾಪದಲ್ಲೂ ಚರ್ಚೆಯಾಗಿ, ಅನೇಕ ಶಾಸಕರು ಕೃತ್ಯವನ್ನು ಖಂಡಿಸಿದ್ದಾರೆ. ಘಟನೆಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಗೊಂಡು ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಕ್ರಮವಹಿ ಸಬೇಕು ಎಂದು ಬಿಜೆಪಿ ಶಾಸಕರು ಆಗ್ರಹಿಸಿದ್ದಾರೆ.

# ವಿಕಲಚೇತನರಿಗೆ ಸರ್ಕಾರಿ ಸೌಲಭ್ಯ ಪಾರದರ್ಶಕವಾಗಿ ಸಿಗುವಂತಾಗಲಿ



**ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ**

ದಾವಣಗೆರೆ,ಡಿ.3- ವಿಕಲಚೇತನರಿಗೆ ಸೌಲಭ್ಯ ಕಲ್ಪಿಸಲು ಹಣ ವಸೂಲಿ ಮಾಡಲಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ. ಆದರೆ ವಿಕಲಚೇತನರ ಪೋಷಕರು ಮೊದಲೇ ಅವರನ್ನು ಪೋಷಣೆ ಮತ್ತು ಕುಟುಂಬ ನಿರ್ವಹಣೆ ಮಾಡುವುದೇ ಕಷ್ಟವಾಗಿರುತ್ತದೆ. ಹೀಗಿರುವಾಗ ಅವರ ಸೌಲಭ್ಯಗಳು ಪಾರದರ್ಶಕವಾಗಿ ಸಿಗುವಂತಾಗಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಕಲಚೇತನರು ಸಮಾಜಕ್ಕೆ ಹೊರೆಯಲ್ಲ, ಸ್ವಾವಲಂಬಿ ಜೀವನ ನಡೆಸಲು ಪೂರಕ ವಾತಾವರಣ ಕಲ್ಪಿಸುವ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಬೇಕೆಂದು ಮನವಿ ಮಾಡಿದರು.

ದಿವ್ಯಾಂಗ ವ್ಯಕ್ತಿಗಳಲ್ಲಿ ಶ್ರದ್ಧೆ, ಬದ್ಧತೆ ಹೆಚ್ಚಿದ್ದು, ಇವರ ಸರ್ವತೋಮುಖ ಅಭಿವೃದ್ಧಿಗೆ ಸರಿಯಾದ ಯೋಜನೆಗಳನ್ನು ರೂಪಿಸುವ ಅವಶ್ಯಕತೆ ಇದೆ ಎಂದರು.

ಸರ್ಕಾರ ವಿಕಲಚೇತನರಿಗಾಗಿ ತ್ರಿಚಕ್ರ ಮೋಟಾರು ಸೈಕಲ್, ಪಿಂಚಣಿ, ಬಸ್ ಪಾಸ್, ಸ್ವ ಉದ್ಯೋಗಕ್ಕೆ ಸಾಲ ಸೇರಿದಂತೆ ಹಲವಾರು ಸೌಲಭ್ಯ ಕಲ್ಪಿಸಿದೆ. ಆದರೆ ಅವರಿಗೆ ಆ ಸೌಲಭ್ಯಗಳನ್ನು ತಲುಪಿಸಲು ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಾಮಾಣಿಕ ಕೆಲಸ ಮಾಡಬೇಕಾಗಿದೆ ಎಂದರು.

ವಿಕಲಚೇತರಿಗೆ ಕೇವಲ 50 ಸಾವಿರದಿಂದ 1 ಲಕ್ಷದವರೆಗೆ ಸಾಲ-ಸೌಲಭ್ಯ ಕಲ್ಪಿಸಿದರೆ ಸಾಲಾದು, ಅವರಿಗೆ 10 ರಿಂದ 15 ಲಕ್ಷದವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡ್ಡಿ ರಹಿತ ಸಾಲ-ಸೌಲಭ್ಯ ನೀಡಿದರೆ ಅವರು ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕವಾಗಿ ಸಬಲರಾಗಿ ಸಮಾಜದ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ಛಲ, ಶ್ರದ್ಧೆ ಇದ್ದರೆ ಯಾವ ಕ್ಷೇತ್ರದಲ್ಲಾದರೂ ಮುಂದೆ ಬರಬಹುದು. ವಿಕಲಚೇತನರು ಸಾಲ- ಸೌಲಭ್ಯ ಪಡೆದುಕೊಂಡು ಸ್ವಾವಲಂಬಿ ಜೀವನ ನಡೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ವಿಕಲಚೇತನರಿಂದ ಹಣ ವಸೂಲಿ ಮಾಡುವ ಬಗ್ಗೆ ಫಲಾನುಭವಿಗಳಿಂದ ದೂರುಗಳು ಬರುತ್ತಿವೆ ಎಂಬ ಮಾಹಿತಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಹಾನಗರಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಎಎಸ್ಪಿ ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್, ಅಂಗವಿಕಲರ ಕಲ್ಯಾಣಾಧಿಕಾರಿ ಡಾ. ಪ್ರಕಾಶ್, ಆಶಾಕಿರಣ ಟ್ರಸ್ಟ್ ಅಧ್ಯಕ್ಷ ರಮಣ್‌ಲಾಲ್ ಪಿ. ಸಂಘವಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಬಾಲಿವುಡ್ ನಟಿ ನರ್ಗಿಸ್ ಸಹೋದರಿ ಅಲಿಯಾ ಫಕ್ರಿ ಬಂಧನ

ನವದೆಹಲಿ, ಡಿ.3- ಬಾಲಿವುಡ್ ನಟಿ ನರ್ಗಿಸ್ ಫಕ್ರಿ ಅವರ ಸಹೋದರಿ ಅಲಿಯಾ ಫಕ್ರಿ ಅವರನ್ನು ಹತ್ಯೆ ಆರೋಪದಡಿ ಬಂಧಿಸಲಾಗಿದೆ.

ಮಾಜಿ ಪ್ರಿಯಕರ 35 ವರ್ಷದ ಎಡ್ವರ್ಡ್ ಜೇಕಬ್ಸ್ ಮತ್ತು 33 ವರ್ಷದ ಅನಸ್ತಾಸಿಯಾ ಎಟಿಯೆನ್ನೆ ನೆಲೆಸಿದ್ದ ಎರಡು ಅಂತಸ್ತಿನ ಗ್ಯಾರೇಜ್‌ಗೆ 43 ವರ್ಷದ ಅಲಿಯಾ ಫಕ್ರಿ ಬೆಂಕಿ ಹಚ್ಚಿದ್ದರು. ಜತೆಗೆ, 'ನೀವೆಲ್ಲರೂ ಇಂದು ಸಾಯುತ್ತೀರಿ' ಎಂದು ಕೂಗಾಡಿದ್ದರು ಎಂದು ವರದಿಯಾಗಿದೆ. ಬೆಂಕಿ ಸಂಪೂರ್ಣವಾಗಿ ಕಟ್ಟಡವನ್ನು ಆವರಿಸಿದ್ದರಿಂದ ಎಡ್ವರ್ಡ್ ಜೇಕಬ್ಸ್ ಮತ್ತು ಅನಸ್ತಾಸಿಯಾ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ದಟ್ಟ ಹೊಗೆಯಿಂದಾಗಿ ಉಸಿರುಗಟ್ಟಿ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.

ಜೇಕಬ್ಸ್ ಒಂದು ವರ್ಷದ ಹಿಂದೆ ಅಲಿಯಾ ಫಕ್ರಿಯೊಂದಿಗೆ ಬ್ರೇಕ್ ಅಪ್ ಮಾಡಿಕೊಂಡಿದ್ದ. ಆದರೂ ಅಲಿಯಾ, ನನ್ನ ಮಗನನ್ನು ಹಿಂಬಾಲಿಸುತ್ತಿದ್ದಳು ಎಂದು ಜೇಕಬ್ಸ್ ಅವರ ತಾಯಿ ಆರೋಪಿಸಿದ್ದಾರೆ.

## ಇಂದಿನಿಂದ ಮಕ್ಕಳ ಅಹವಾಲು, ಮಕ್ಕಳ ಕಾಯ್ದೆ ಅರಿವು ಕಾರ್ಯಕ್ರಮ

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವತಿಯಿಂದ ಮಕ್ಕಳ ಅಹವಾಲು ಹಾಗೂ ಮಕ್ಕಳ ಕಾಯ್ದೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವು ಇಂದು - ನಾಳೆ ನಡೆಯಲಿದೆ.

ಇಂದು ಬೆಳಗ್ಗೆ 10.30ಕ್ಕೆ ಚನ್ನಗಿರಿ ವಾಲ್ಮೀಕಿ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿ, ಸಿಬ್ಬಂದಿಗಳಿಗೆ ಜೆ.ಜೆ.ಕಾಯ್ದೆ-2015, ಬಾಲ್ಯ ವಿವಾಹ ನಿಷೇಧ ಕಾಯ್ದೆ-2006, ಆರ್‌ಟಿಇ ಕಾಯ್ದೆ-2009, ಭ್ರೂಣ ಹತ್ಯೆ, ವಲಸೆ ಕುಟುಂಬದಲ್ಲಿನ ಮಕ್ಕಳ ರಕ್ಷಣೆ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ನಿಷೇಧ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಪುನರ್ವಸತಿ ಕುರಿತು ಸಭೆ ನಡೆಯಲಿದೆ.

ನಾಳೆ ಗುರುವಾರ ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿ, ಸಿಬ್ಬಂದಿಗಳಿಗೆ ಮಕ್ಕಳ ಕಾಯ್ದೆಗಳಿಗೆ ಸಂಬಂಧಿಸಿದಂತೆ ಮಕ್ಕಳ ಅಹವಾಲು ಹಾಗೂ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

## ಹಿಂದೂಗಳ ದೌರ್ಜನ್ಯ ಖಂಡಿಸಿ ಇಂದು ನಗರದಲ್ಲಿ ಪ್ರತಿಭಟನೆ

ದಾವಣಗೆರೆ, ಡಿ.3- ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ, ಇಸ್ಕಾನ್‌ನ ಹಿಂದೂ ಸಂತ ಶ್ರೀ ಚಿನ್ಮಯ ಕೃಷ್ಣದಾಸ್ ಅವರ ಬಂಧನ ಖಂಡಿಸಿ, ಬಾಂಗ್ಲಾದಲ್ಲಿ ಹಿಂದೂಗಳ ಸುರಕ್ಷತೆಗಾಗಿ ಒತ್ತಾಯಿಸಿ ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ನಾಳೆ ದಿನಾಂಕ 4ರ ಬುಧವಾರ ನಗರದ ಜಯದೇವ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಇಸ್ಕಾನ್ ದಾವಣಗೆರೆ ಘಟಕದ ಮುಖ್ಯಸ್ಥ ಅವಧೂತ ಚಂದ್ರದಾಸ್ ಗುರೂಜಿ, ನಾಳೆ ಬುಧವಾರ ಬೆಳಿಗ್ಗೆ 10.30ಕ್ಕೆ ಹಿಂದೂ ಸಂಘಟನೆಗಳು, ಸಮುದಾಯದೊಂದಿಗೆ ಪ್ರತಿಭಟನೆ ನಡೆಸಿ, ಗಾಂಧಿ ವೃತ್ತದ ಮೂಲಕ ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಬಾಂಗ್ಲಾದಲ್ಲಿ ಹಿಂದೂ ದೇವಸ್ಥಾನಗಳನ್ನು ಧ್ವಂಸ ಮಾಡಲಾಗುತ್ತಿದೆ. ಅಲ್ಪಸಂಖ್ಯಾತ ಹಿಂದೂಗಳ ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯಗಳು ನಡೆಯುತ್ತಿರುವುದು ಖಂಡನೀಯ. ಪ್ರಕೃತಿ ವಿಕೋಪ ಮೊದಲಾದ ಸಮಯದಲ್ಲಿ ಇಸ್ಕಾನ್ ಬಾಂಗ್ಲಾ ನಿವಾಸಿಗಳಿಗೆ ನೆರವು, ಆಶ್ರಯ ನೀಡಿತ್ತು. ಈ ಉಪಕಾರ ಮರೆತು ಅನ್ನ ನೀಡಿದ ಕೈಯನ್ನು ಕತ್ತರಿಸಲು ಹೊರಟಿದ್ದಾರೆ. ಇದರಿಂದ ಆ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂದರು.

ಹಿಂದೂ ಸಂಘಟನೆಯ ಮುಖಂಡ ಎಸ್.ಟಿ. ವೀರೇಶ್ ಮಾತನಾಡಿ, ಬಾಂಗ್ಲಾದಲ್ಲಿ ಹೊಸ ಸರ್ಕಾರ ಬಂದ ನಂತರ ಮುಸ್ಲಿಂ ಮೂಲಭೂತವಾದಿಗಳಿಂದ ಹಿಂದೂಗಳ ಮೇಲಿನ ದೌರ್ಜನ್ಯ ಹೆಚ್ಚಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲು ಶೀಘ್ರವೇ ಅಲ್ಲಿನ ದೌರ್ಜನ್ಯಗಳ ತಡೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಹಿಂದೂ ಹಿತರಕ್ಷಣಾ ಸಮಿತಿಯ ಸತೀಶ್ ಪೂಜಾರಿ ಮಾತನಾಡಿ, ವಲಸೆ ಬಾಂಗ್ಲಾ ನಿವಾಸಿಗಳನ್ನು ದೇಶದಿಂದ ಹೊರ ಹಾಕುವ ಮೂಲಕ ಬಾಂಗ್ಲಾಕ್ಕೆ ಭಾರತ ಸರ್ಕಾರ ಸ್ಪಷ್ಟ ಎಚ್ಚರಿಕೆ ನೀಡಬೇಕು ಎಂದು ಒತ್ತಾಯಿಸಿದರು.

ಸಿದ್ಧಲಿಂಗ ಸ್ವಾಮಿ, ಟಿ.ಆರ್. ಕೃಷ್ಣಪ್ಪ, ರಾಜು, ಬಸವರಾಜ್ ಉಚ್ಚಂಗಿದುರ್ಗ, ರಾಜನಹಳ್ಳಿ ಶಿವಕುಮಾರ್, ಹೆಚ್.ಪಿ. ವಿಶ್ವಾಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಮುದ್ರ ದಂಡೆ ಮೇಲೆ ಕುಳಿತು ಧ್ಯಾನ ಮಾಡುತ್ತಿದ್ದ ನಟಿ ಅಲೆಗೆ ಸಿಕ್ಕು ಸಾವು

ಥಾಯ್ಲೆಂಡ್, ಡಿ.3- ರಷ್ಯನ್ ನಟಿಯೊಬ್ಬರು ಸಮುದ್ರ ದಂಡೆಯ ಬಳಿ ಕಲ್ಲಿನ ಮೇಲೆ ಕುಳಿತು ಧ್ಯಾನ ಮಾಡುತ್ತಿದ್ದಾಗ ಅಲೆಗಳ ಹೊಡೆತಕ್ಕೆ ಸಿಲುಕಿ ದಾರುಣವಾಗಿ ಮೃತಪಟ್ಟ ಘಟನೆ ನಡೆದಿದೆ.

ಥಾಯ್ಲೆಂಡ್‌ನ ಕೋಯ್ ಸಮುಯಿ ದ್ವೀಪಕ್ಕೆ ರಜೆಯ ಸಮಯವನ್ನು ಕಳೆಯಲು ಗೆಳೆಯನೊಂದಿಗೆ ಬಂದಿದ್ದ 24 ವರ್ಷದ ನಟಿ ಕಮಿಲ್ಲಾ ಬೆಲ್ಯಾಟಸ್ಕಾ ಮೃತ ನಟಿ. ಕಮಿಲ್ಲಾ ಸಮುದ್ರದ ದಡದಲ್ಲಿ ಕಲ್ಲು ಬಂಡೆಯ ಮೇಲೆ ಕುಳಿತಿದ್ದ ವೇಳೆ ಭಾರಿ ಗಾತ್ರದ ಅಲೆಯೊಂದು ಅವರನ್ನು ಎಳೆದೊಯ್ದ ದೃಶ್ಯಗಳು ಹತ್ತಿರದಲ್ಲಿದ್ದ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.


ಹತ್ತಿರದಲ್ಲಿದ್ದ ಪ್ರವಾಸಿಗರು ಕಮಿಲ್ಲಾ ಅವರನ್ನು ರಕ್ಷಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕೆಲ ಹೊತ್ತಿನ ಬಳಿಕ ಅವರ ಮೃತದೇಹ ಕಿಲೋಮೀಟರ್ ದೂರದಲ್ಲಿ ದೊರೆತಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

# ದಶಕಗಳೇ ಕಳೆದರೂ ಪಿ.ಬಿ ರಸ್ತೆಯಲ್ಲಿ ಕಾಣಲಿಲ್ಲ ಅಲಂಕಾರಿಕ ಗಿಡ

## ಅವ್ಯವಸ್ಥೆಯಲ್ಲಿ ಐತಿಹಾಸಿಕ ಊರು, ನಗರಸಭೆಯ ನಿರ್ಲಕ್ಷ್ಯ, ಹರಿಹರಕ್ಕೆ ಗುಂಡಿ ರೋಗ

**ಸುನೀಲ್ ಹರಿಹರ**





1) ರಸ್ತೆ ವಿಭಜಕಗಳಲ್ಲಿ ಅಲಂಕಾರಿಕ ಗಿಡಗಳಿಲ್ಲದೆ ಬರಡಾಗಿರುವುದು. 2) ಡಿವೈಡರ್‌ಗಳಲ್ಲಿ ಕಸದ ರಾಶಿ ತುಂಬಿರುವುದು. 3) ಫ್ಲೈ ಒವರ್ ಕೆಳಗಿನ ರಸ್ತೆಯಲ್ಲಿ ಜಲ್ಲಿ ಕಲ್ಲು ಎದ್ದಿರುವುದು ಹಾಗೂ ಕಬ್ಬಿಣದ ರಾಡುಗಳು ಕಣ್ಣಿಗೆ ರಾಚುತ್ತಿರುವುದು. 4) ಅಪೂರ್ಣಗೊಂಡ ರಸ್ತೆ ವಿಭಜಕ

**ಇಲ್ಲಿನ ಪಿ.ಬಿ ರಸ್ತೆಯಲ್ಲಿ ಅಲಂಕಾರಿಕ ಗಿಡಗಳು ಇಲ್ಲದಿರುವುದರಿಂದ ನಗರದ ಅಂದ ಕುಗ್ಗಿದೆ. ಈ ಕೂಡಲೇ ನಗರಸಭೆ ಅಲಂಕಾರಿಕ ಗಿಡ ನೆಡುವ ಕಾರ್ಯದ ಜತೆಗೆ ಊರಿನ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು.**

**- ವೀರೇಶ್ ಅಜ್ಜಣ್ಣನವರ್.,**
ವಕೀಲರು ಹಾಗೂ ಪರಿಸರ ಪ್ರೇಮಿ

ದಾವಣಗೆರೆ-ಹರಿಹರವನ್ನು ಅವಳಿ ನಗರವೆಂದರೆ ತಪ್ಪಾಗಲಾರದು. ಜಿಲ್ಲಾ ಕೇಂದ್ರಕ್ಕೆ ಹತ್ತಿರವಿರುವ ಹಾಗೂ ಸ್ಮಾರ್ಟ್ ಸಿಟಿಗೆ ಅಂಟಿಕೊಳ್ಳುತ್ತಿರುವ ಹರಿಹರವು ದಶಕಗಳಿಂದಲೂ ಅಭಿವೃದ್ಧಿ ಹಾಗೂ ಸೌಂದರ್ಯ ವೃದ್ಧಿಯಲ್ಲಿ ಹೊಸತನದ ಸ್ಪರ್ಷ ಮರೀಚಿಕೆಯಾಗಿದೆ.

ಹೌದು, ನಗರದಲ್ಲಿ ಪಿ.ಬಿ. ರಸ್ತೆ ಹೊಸದಾಗಿ ನಿರ್ಮಾಣಗೊಂಡು ದಶಕಗಳೇ ಕಳೆದರೂ, ಇಂದಿಗೂ ರಸ್ತೆ ವಿಭಜಕಗಳಲ್ಲಿ ಅಲಂಕಾರಿಕ ಗಿಡಗಳು ತಲೆ ಎತ್ತಲಿಲ್ಲ. ಈ ಬಗ್ಗೆ ನಗರಸಭೆಯೂ ಸಹ ಅಲಂಕಾರಿಕ ಗಿಡ ಬೆಳೆಸುವ ಯೋಚನೆ ಮಾಡುತ್ತಿಲ್ಲ.

ರಸ್ತೆ ವಿಭಜಕಗಳಲ್ಲಿ ಕಸ-ಮುಸರಿ ಮತ್ತು ಪ್ಲಾಸ್ಟಿಕ್ ರಾಶಿ ಬಿದ್ದಿರುತ್ತದೆ. ಹೀಗೆ ಮಲಿನಗೊಂಡ ರಸ್ತೆ ವಿಭಜಕಗಳು ದುರ್ನಾತ ಬೀರುತ್ತಿವೆ. ಸುಂದರವಾಗಿ ಕಾಣಬೇಕಿದ್ದ ಐತಿಹಾಸಿಕ ಊರು ಒಂದಿಲ್ಲೊಂದು ಸಮಸ್ಯೆಯಿಂದ ಬಳಲುತ್ತಲೇ ಇದೆ.

ರಸ್ತೆ ವಿಭಜಕಗಳಿಗೆ ಜಾಹೀರಾತು ಪ್ರತಿ ಅಂಟಿಸಿರುವುದು, ಉಗಿದ ಗುಟಕಾ ಕಲೆಗಳು ಹಾಗೂ ವಿಭಜಕಗಳಿಗೆ ಬಳಿದ ಬಣ್ಣ ಮಾಸಿದ್ದರಿಂದ ನಗರದ ಅಂದ ಕ್ಷೀಣಿಸಿದೆ.

ನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ಹರಿಹರ ಮಾರ್ಗವಾಗಿ ಸಂಚರಿಸುವ ಪರಸ್ಥಳದ ಪ್ರಯಾಣಿಕರು, ಈ ಊರಿನ ಅವ್ಯವಸ್ಥೆಯ ಬಗ್ಗೆ ಆಡಿಕೊಳ್ಳುವುದು ಇಲ್ಲಿನ ವಾಸಿಗಳಿಗೆ ಮುಜುಗರ ತಂದಿದೆ ಎಂದು ಸ್ಥಳೀಯರು ದೂರುತ್ತಿದ್ದಾರೆ.

**ಅವೈಜ್ಞಾನಿಕ ರಸ್ತೆ ವಿಭಜಕ :** ಇಲ್ಲಿನ ರಸ್ತೆ ವಿಭಜಕಗಳು ಅಲ್ಲಲ್ಲಿ ಅಪೂರ್ಣ ಸ್ಥಿತಿಯಲ್ಲಿವೆ. ಕೆಲವೆಡೆ ರಾಡುಗಳು ಕಣ್ಣಿಗೆ ರಾಚುತ್ತವೆ ಮತ್ತು ರಸ್ತೆ ಬದಲಿಸುವ ಸ್ಥಳದಲ್ಲಿ ಕಾಂಕ್ರಿಟ್ ಹಾಕದಿರುವುದರಿಂದ ಮಣ್ಣು, ಕಲ್ಲು ಹಾಗೂ ಗುಂಡಿಗಳಿವೆ.ಇದರಿಂದಾಗಿ ವಾಹನ ಸವಾರರು ರಸ್ತೆ ಬದಲಿಸುವಾಗ ಸಂಕಷ್ಟಕ್ಕೆ ತುತ್ತಾಗುತ್ತಿದ್ದಾರೆ.

ದ್ವಿಚಕ್ರ ವಾಹನ ಸವಾರರು ರಸ್ತೆ ಬದಲಿಸುವ ವೇಳೆ ಸ್ಕಿಡ್ ಆಗಿ ಅಪಘಾತಕ್ಕೆ ತುತ್ತಾದ ಅನೇಕ ದುರಂತಗಳು ಸಂಭವಿಸಿದ್ದು, ಇಂತಹ ಘಟನೆ ಸಂಭವಿಸುವುದನ್ನು ತಪ್ಪಿಸಲು ಅಪೂರ್ಣವಾಗಿರುವ ವಿಭಜಕಗಳನ್ನು ಸರಿಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸ್ಥಳೀಯರು ಒತ್ತಾಯಿಸಿದ್ದಾರೆ.

**ರಸ್ತೆಗಳಿಗೆ ಗುಂಡಿ ರೋಗ :** ಈ ಊರಿನ ಬಹುತೇಕ ರಸ್ತೆಗಳು ಗುಂಡಿಮಯವಾಗಿವೆ. ಜಿಲ್ಲಾ ಕೇಂದ್ರಕ್ಕೆ ಸಾಗುವ ಫ್ಲೈ ಒವರ್ ಕೆಳಗಿನ ರಸ್ತೆ ಸಂಪೂರ್ಣ ಹಾಳಾಗಿ ಜಲ್ಲಿ ಕಲ್ಲು ಎದ್ದಿವೆ ಹಾಗೂ ಕಬ್ಬಿಣದ ರಾಡುಗಳು ಎದ್ದು ಕಾಣುತ್ತಿವೆ.

ಹರಪನಹಳ್ಳಿ-ಶಿವಮೊಗ್ಗ ರಸ್ತೆಯಲ್ಲಿ ಅಪಾಯ ಆಹ್ವಾನಿಸುವ ಗುಂಡಿಗಳಿದ್ದು, ಅವುಗಳನ್ನು ಮುಚ್ಚಲು ಆಗಾಗ ಮಣ್ಣು ತುಂಬುತ್ತಾರೆ. ಆದರೆ ಅವುಗಳಿಗೆ ಶಾಶ್ವತ ಪರಿಹಾರ ಇಲ್ಲದಂತಾಗಿದೆ.


**91ನೇ ಜನ್ಮದಿನದ ಶುಭಾಶಯಗಳು**



ನಗರದ ಹಗೇದಿಬ್ಬ ವೃತ್ತದಲ್ಲಿರುವ ಶ್ರೀ ಬೊಮ್ಮಲಿಂಗಸ್ವಾಮಿ ಮಠದ ದಿ.ಹೆಚ್.ಎಂ ಬೊಮ್ಮಲಿಂಗಸ್ವಾಮಿ ಇವರ ಧರ್ಮಪತ್ನಿ

**ಶ್ರೀಮತಿ ಹೆಚ್.ಎಂ ಅನ್ನಪೂರ್ಣಮ್ಮನವರು**

ದಿ.: 04.12.2024ರಂದು 90ನೇ ವರ್ಷ ಪೂರೈಸಿ 91ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ದೇವರು ಇವರಿಗೆ ಆರೋಗ್ಯ ಭಾಗ್ಯ ಕರುಣಿಸಲಿ ಮತ್ತು ಶತಾಯುಷಿಗಳಾಗಲಿ ಎಂದು ಪ್ರಾರ್ಥಿಸುತ್ತಾ ಶುಭ ಕೋರುವವರು

ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಮತ್ತು ಬೊಮ್ಮಲಿಂಗ ಸ್ವಾಮಿ ಮಠದ ವಂಶಸ್ಥರು,
ಅಪಾರ ಬಂಧು ಬಳಗದವರು.

# ಪ್ರಾಥಮಿಕ ಶಿಕ್ಷಣ ಗುಣಮಟ್ಟದಲ್ಲಿ ದೊರೆತರೆ ಮಕ್ಕಳಿಗೆ ಉತ್ತಮ ಅಡಿಪಾಯ ದೊರೆಯುತ್ತದೆ



**ಮಿಟ್ಲಕಟ್ಟೆಯಲ್ಲಿ ಜಿ.ಪಂ. ಸಿಇಓ ಸುರೇಶ್ ಬಿ.ಇಟ್ನಾಳ್**

ಮಲೇಬೆನ್ನೂರು, ಡಿ. 3- ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಹಿನ್ನಡೆ ಕಂಡು ಬಂದಿದ್ದು ಪ್ರಾಥಮಿಕ ಶಾಲಾ ಶಿಕ್ಷಕರು ಈ ಕೊರತೆ ನೀಗಿಸಬೇಕೆಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಬಿ.ಇಟ್ನಾಳ್ ಸೂಚನೆ ನೀಡಿದರು.

ಮಿಟ್ಲಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಬೆಂಗಳೂರಿನ ಇಂಡಿಯಾ ಸುಧಾರ್ ಮತ್ತು ಪವರ್ ಸ್ಕೂಲ್ ಸಂಸ್ಥೆಗಳಿಂದ ನಿರ್ಮಿಸಿದ ನೂತನ ಶೌಚಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಥಮಿಕ ಶಿಕ್ಷಣ ಗುಣಮಟ್ಟದಲ್ಲಿ ದೊರೆತರೆ ಮಕ್ಕಳಿಗೆ ಉತ್ತಮ ಅಡಿಪಾಯ ದೊರೆಯುತ್ತದೆ. ಅಡಿಪಾಯ ಗಟ್ಟಿಯಾಗದಿದ್ದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೇಗೆ ಪಾಸಾಗಲು ಸಾಧ್ಯವೆಂದು ಪ್ರಶ್ನಿಸಿದ ಅವರು, ಶಿಕ್ಷಕರು ಪ್ರಾಮಾಣಿಕವಾಗಿ ಬೋಧನೆ ಮಾಡಬೇಕೆಂದರು.

ಪ್ರೌಢಶಾಲಾ ವಿದ್ಯಾರ್ಥಿನಿಯರು ಗಣನೀಯ ಸಂಖ್ಯೆಯಲ್ಲಿ ಮಾಸಿಕ ಕಿರು ಪರೀಕ್ಷೆಗೆ ಗೈರಾಗುತ್ತಿದ್ದಾರೆ. ಅವರಲ್ಲಿ ಹಲವರು ಬಾಲ್ಯವಿವಾಹ ಆಗುತ್ತಿರುವ ಮಾಹಿತಿ ಇದೆ. ಗ್ರಾಪಂ ವ್ಯಾಪ್ತಿಯ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರು, ಪೋಷಕರು ಎಚ್ಚರಿಕೆ ವಹಿಸಬೇಕು.

ಮಕ್ಕಳ ಗ್ರಾಮಸಭೆ ನಡೆಸದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಅವರು, ಬಿಸಿಯೂಟ ಯೋಜನೆ ಇದ್ದರೂ ಹಲವು ವಿದ್ಯಾರ್ಥಿಗಳಲ್ಲಿ ರಕ್ತಹೀನತೆ, ಚರ್ಮ ಕಾಯಿಲೆ, ಅನಿಮಿಯಾ ಕಂಡುಬಂದಿದೆ. ಈ ಕುರಿತು ಸಂಬಂಧಿತರು ಗಮನ ಹರಿಸಬೇಕಾಗಿದೆ ಎಂದರು.

ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಪ್ರಸ್ತುತ 110 ಶೌಚಾಲಯಗಳು ನಿರ್ಮಾಣಗೊಂಡಿದ್ದು 240 ಶೌಚಾಲಯಗಳು ನಿರ್ಮಾಣ ಹಂತದಲ್ಲಿವೆ. ಶಾಲೆಗಳಿಗೆ ಶಾಲಾ ಮೈದಾನ, ಶೌಚಾಲಯ ಇತರೆ ಮೂಲ ಸೌಕರ್ಯ ಒದಗಿಸಲು ಸಂಬಂಧಿತರು ಆದ್ಯತೆ ನೀಡಬೇಕೆಂದರು.

ರಾಜ್ಯದಲ್ಲಿರುವ ಕಂಪನಿಗಳಿಂದ ವಾರ್ಷಿಕ ಒಟ್ಟು ಮೂರು ಸಾವಿರ ಕೋಟಿ ರೂ. ಸಾಮಾಜಿಕ ಹೊಣೆಗಾರಿಕೆಯ ನಿಧಿ (ಸಿಎಸ್‌ಆರ್ ಫಂಡ್) ಸೃಜಿಸುತ್ತದೆ. ಈ ಅನುದಾನ ಬಳಕೆ ಮಾಡಿದರೆ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಮುಖ್ಯವಾಹಿನಿಗೆ ಬರಲು ಸಾಧ್ಯ. ನಮ್ಮ ಸಂಸ್ಥೆಯಿಂದ ಗ್ರಾಮೀಣ ಶಾಲೆಗಳಿಗೆ ಶೌಚಾಲಯ, ಆಟಿಕೆ, ಕ್ರೀಡಾ ಸಾಮಗ್ರಿ, ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಿದ್ದೇವೆ ಎಂದು ಪವರ್ ಸ್ಕೂಲ್ ಸಂಸ್ಥೆ ಮುಖ್ಯಸ್ಥ ಪ್ರಕಾಶಂ ತಿಳಿಸಿದರು.

ಕಳೆದ ನಾಲ್ಕು ವರ್ಷಗಳಲ್ಲಿ ತಾಲ್ಲೂಕಿನಲ್ಲಿ ರೂ.2 ಕೋಟಿಗಿಂತ ಹೆಚ್ಚಿನ ಸಿಎಸ್‌ಆರ್ ಫಂಡ್ ಶಾಲೆಗಳಿಗೆ ವಿನಿಯೋಗಿಸಲಾಗಿದ್ದು, 40 ಸಾವಿರ ಮಕ್ಕಳು ಸೌಲಭ್ಯಗಳನ್ನು ಪಡೆದಿರುತ್ತಾರೆ. ಈ ದಿಶೆ ಯಲ್ಲಿ ಶಿಕ್ಷಕ ಶರಣಕುಮಾರ್ ಹೆಗಡೆ ಮತ್ತು ತಂಡ ದವರ ಕಾರ್ಯ ಶ್ಲಾಘನೀಯ ಎಂದು ಕ್ಷೇತ್ರ ಶಿಕ್ಷ ಣಾಧಿಕಾರಿ ಡಿ. ದುರುಗಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ನರೇಗಾ ಯೋಜನೆಯಲ್ಲಿ ಈ ಶಾಲಾ ಮೈದಾನವನ್ನು ಸಮತಟ್ಟ ಮಾಡಿ, ಮೂಲಭೂತ ಸೌಕರ್ಯ ಒದಗಿಸಿಕೊಡಲಾಗುವುದು ಎಂದು ಗ್ರಾಪಂ ಅಧ್ಯಕ್ಷರಾದ ಲತಾ ಹೇಳಿದರು.

ಇಂಡಿಯಾ ಸುಧಾರ್ ಸಂಸ್ಥೆಯ ಕಿರಣ್, ತಾಲ್ಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶರಣಕುಮಾರ್ ಹೆಗಡೆ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಖಜಾಂಚಿ ಗಿರೀಶ್, ವಿವಿಧ ಸಂಘಟನೆಗಳ ಶಿಕ್ಷಕರಾದ ಸತೀಶ್, ಪಿ.ರಾಮಕೃಷ್ಣಪ್ಪ, ಮಲ್ಲಿಕಾರ್ಜುನ್, ಮಂಜಪ್ಪ ಬಿದರಿ, ಆನಂದ್, ಕೆ.ಭೀಮಪ್ಪ, ಹನುಮಂತ ನಾಯ್ಕ್, ಮುಖಂಡರಾದ ಚಂದ್ರಪ್ಪ, ಮನೋಹರ್, ವಿವಿಧ ಕಂಪನಿಗಳ ಅಧಿಕಾರಿಗಳಾದ ವಿನೋದ್ ಮುರುಗೋಡ್, ಸೌಂದರ್ಯ ರಾಜನ್, ಗ್ರಾಪಂ ಮಾಜಿ ಅಧ್ಯಕ್ಷೆ ಸೌಭಾಗ್ಯ, ಚನ್ನಬಸಪ್ಪ, ಪಿಡಿಓ ರವಿ, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

# ಚನ್ನಗಿರಿ : ಬಗರ್ ಹುಕ್ಕುಂ ಹಕ್ಕುಪತ್ರಕ್ಕಾಗಿ ಆಗ್ರಹಿಸಿ ಇಂದಿನಿಂದ ಗ್ರಾ.ಪಂ. ಚಲೋ

ದಾವಣಗೆರೆ, ಡಿ.3- ಬಗರ್ ಹುಕ್ಕುಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಿಸಲು ಆಗ್ರಹಿಸಿ, ಕರ್ನಾಟಕ ಭೂ ಹಕ್ಕುದಾರರ ವೇದಿಕೆಯಿಂದ ಚನ್ನಗಿರಿ ತಾಲ್ಲೂಕಿನಲ್ಲಿ ನಾಳೆ ದಿನಾಂಕ 4ರಿಂದ 6ವರೆಗೆ 'ಗ್ರಾಪಂ ಚಲೋ' ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾಧ್ಯಕ್ಷ ಷಣ್ಮುಖನಾಯ್ಕ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿ ಹಕ್ಕು ಪತ್ರ ನೀಡಲು ಗ್ರಾಮ ಪಂಚಾಯಿತಿಗಳ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸುವ 'ಗ್ರಾಪಂ ಚಲೋ' ಕಾರ್ಯಕ್ರಮವನ್ನು ಚನ್ನಗಿರಿ ತಾಲ್ಲೂಕಿನ 16 ಗ್ರಾ.ಪಂ.ಗಳಲ್ಲಿ ನಡೆಸಲಾಗುವುದು ಎಂದರು.

ಬಗರ್‌ಹುಕ್ಕುಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರಕ್ಕೆ ಆಗ್ರಹಿಸಿ ಮುಂದುವರಿದ ಭಾಗವಾಗಿ ಇದೇ ದಿನಾಂಕ 9ರಂದು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು.

ದಿನಾಂಕ 20ರ ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಅಹೋರಾತ್ರಿ ಧರಣಿ ನಡೆಸಲು ಸಹ ತೀರ್ಮಾನಿಸಲಾಗಿದೆ ಎಂದರು.

ಕಳೆದ ನೂರಾರು ವರ್ಷಗಳಿಂದಲೂ ಜೀವನೋಪಾಯಕ್ಕೆ ಸಾಗುವಳಿ ಮಾಡಿಕೊಂಡು ಬರುತ್ತಿರುವ ಭೂರಹಿತ ಬಗರ್ ಹುಕ್ಕುಂ ಹಾಗೂ ಅರಣ್ಯ ಅವಲಂಬಿತ ರೈತರಿಗೆ ಕೂಡಲೇ ಸಾಗುವಳಿ ಚೀಟಿ ಹಾಗೂ ಅರಣ್ಯ ಹಕ್ಕಿನ ಮಾನ್ಯತೆ ಪತ್ರ ನೀಡುವಂತೆ, ಜಿಲ್ಲಾ ಭೂ-ಹಕ್ಕುದಾರರ ವೇದಿಕೆಯ ಸ್ಥಳೀಯ ಶಾಸಕರು, ತಹಶೀಲ್ದಾರರು ಹಾಗೂ ಜಿಲ್ಲಾ ಮಟ್ಟದ ಅರಣ್ಯ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿ ಹಾಗೂ ಸರ್ಕಾರಕ್ಕೆ ಒತ್ತಾಯಿಸುತ್ತಲೇ ಬಂದಿದೆ. ಆದರೂ ಎಲ್ಲಿಡೆ ಈ ಕಾರ್ಯ ಸಮರ್ಪಕವಾಗಿ ನಡೆದಿಲ್ಲ. ಹೊಸದಾಗಿ ಆಯ್ಕೆಯಾದ ಶಾಸಕರು ಹಾಗೂ ಲೋಕಸಭಾ ಸದಸ್ಯರು ಸಾಗುವಳಿ ಚೀಟಿ ಹಾಗೂ ಹಕ್ಕುಪತ್ರ ಕೊಡಿಸುವುದರ ಮೂಲಕ ಭೂರಹಿತರ ಬಗ್ಗೆ ತಮ್ಮ ಇಚ್ಛಾಶಕ್ತಿ ವ್ಯಕ್ತಪಡಿಸಬೇಕು ಎಂದು ಕೋರಿದರು.

ಬಗರ್‌ಹುಕ್ಕುಂ ಮತ್ತು ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕು ಪತ್ರ ಕೊಡಿಸುವಂತೆ ಚನ್ನಗಿರಿ, ಹೊನ್ನಾಳಿ ಮತ್ತು ನ್ಯಾಮತಿ ತಾಲೂಕುಗಳ ಸುಮಾರು 39 ಹಳ್ಳಿಗಳ ರೈತರಿಂದ ಸ್ಥಳೀಯ ಶಾಸಕರು, ತಹಶೀಲ್ದಾರರು ಹಾಗೂ ಉಪ ವಿಭಾಗ ಮಟ್ಟದ ಅರಣ್ಯ ಸಮಿತಿಯ ಅಧ್ಯಕ್ಷರಾದ ಉಪ ವಿಭಾಗಾಧಿಕಾರಿಯವರಿಗೆ ಮತ್ತು ಜಿಲ್ಲಾ ಮಟ್ಟದ ಅರಣ್ಯ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಲಾಗುವುದು ಎಂದು ವೇದಿಕೆಯ ರಾಜ್ಯ ಸಂಚಾಲಕ ಕೆ.ಬಿ. ರೂಪಾನಾಯ್ಕ ತಿಳಿಸಿದರು.

ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ಯಾವುದೇ ರೈತರನ್ನು ಒಕ್ಕಲೆಬ್ಬಿಸಬಾರದು. ಸಾಗುವಳಿ ಚೀಟಿ ಹಾಗೂ ಅರಣ್ಯ ಹಕ್ಕಿನ ಮಾನ್ಯತೆ ಪತ್ರ ಪಡೆದ ರೈತರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿ, ಸರ್ಕಾರದಿಂದ ಸಿಗುವ ಎಲ್ಲ ಸೌಲಭ್ಯಗಳು ರೈತರಿಗೆ ದೊರೆಯುವಂತಾಗಬೇಕು. ಈ ದಿಸೆಯಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಸ್ಪಂದಿಸಬೇಕು ಎಂದರು.

ವೇದಿಕೆಯ ಪ್ರಮುಖರಾದ ಆರ್. ಮಂಜುನಾಥ್, ಸಾಧಿಕ್ ಸಾಬ್, ದೇವರಾಜ್, ವೆಂಕಟೇಶ್, ಈಶ್ವರಪ್ಪ, ರೇವಣಸಿದ್ದಪ್ಪ ಹಾಗೂ ಸದಸ್ಯರಾದ ಪೀರಾನಾಯ್ಕ ಪತ್ರಿಕಾಗೋಷ್ಠಿಯಲ್ಲಿದ್ದರು.

## ವಿಕಲಚೇತನರ ಶ್ರೇಯೋಭಿವೃದ್ಧಿಗೆ 44 ಕೋಟಿ ರೂ.: ಸಿಎಂ ಭರವಸೆ

**(1ನೇ ಪುಟದಿಂದ)** ಅನುದಾನಕ್ಕೆ ಒಳಪಡಿಸಲಾಗಿದೆ ಎಂದರು.

ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರ ಅವಲಂಬಿತರಿಗೆ ನೀಡಲಾಗುವ ಮರಣ ಪರಿಹಾರ ನಿಧಿಯನ್ನು ಪರಿಷ್ಕರಿಸಿ 1 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ, ಸರ್ಕಾರಿ ಉದ್ಯೋಗಗಳಲ್ಲಿ 'ಸಿ' ಮತ್ತು 'ಡಿ' ಸಮೂಹದ ಹುದ್ದೆಗಳಲ್ಲಿ ಶೇ.5 ಹಾಗೂ 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇ.4ರಷ್ಟು ಮೀಸಲಾತಿ ನೀಡಲಾಗಿದೆ.

ಅಲ್ಲದೇ ಇವರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಲು ರಾಜ್ಯ ಮಟ್ಟದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ, ಹುದ್ದೆಗಳ ಗುರುತಿಸುವಿಕೆ ಕಾರ್ಯ ನಡೆಯುತ್ತಿದೆ, ವಿಕಲಚೇತನರ ಅನುಕೂಲಕ್ಕಾಗಿ ವಾಹನಗಳನ್ನು ನೀಡಲು ಈಗಾಗಲೇ ಸೂಚನೆ ನೀಡಲಾಗಿದೆ.

ಸಾಮಾಜಿಕ ಸಬಲೀಕರಣಕ್ಕಾಗಿ ಶೇಕಡಾ 40 ರಿಂದ 74ರಷ್ಟು ವಿಕಲಚೇತನರಿಗೆ 800 ರೂ. ಹಾಗೂ ಶೇಕಡಾ 75 ಮತ್ತು ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಉಳ್ಳವರಿಗೆ 1400 ರೂ. ಮತ್ತು ತೀವ್ರತರ ಮನೋವೈಕಲ್ಯತೆ ವ್ಯಕ್ತಿಗಳಿಗೆ 2000 ರೂ. ಪ್ರತಿ ತಿಂಗಳು ಮಾಸಾಶನ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ ನೀಡಲಾಗುವ ವಿಕಲಚೇತನರ ಮಾಸಾಶನ ಮೊತ್ತ ಹೆಚ್ಚಿಸುವಂತೆ ಕೋರಿ ರಾಜ್ಯ ಸರ್ಕಾರ ಪತ್ರ ಬರೆಯಲು ಕ್ರಮ ಕೈಗೊಳ್ಳಲಿದೆ ಎಂದರು.

# ಜಗತ್ತಿನ ಅರಿವಿಗೆ ಆಳವಾದ ಅಧ್ಯಯನ ಮುಖ್ಯ : ಸಿದ್ದಪ್ಪ



**ಅತ್ತಿಗೆರೆ**

ದಾವಣಗೆರೆ, ಡಿ.3- ಆಳವಾದ ಅಧ್ಯಯನದಿಂದ ಜಗತ್ತಿನ ಅರಿವು ಆಗಲಿದೆ ಎಂದು ಅರವಿಂದ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಕೆ.ಆರ್ ಸಿದ್ದಪ್ಪ ಹೇಳಿದರು.

ತಾಲ್ಲೂಕಿನ ಅತ್ತಿಗೆರೆಯ ಚೆನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಈಚೆಗೆ ಆಯೋಜಿಸಿದ್ದ 'ಕೋಶ ಓದು ದೇಶ ಸುತ್ತು' ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನವನ್ನು ಯಾರೂ ವ್ಯರ್ಥ ಮಾಡಿಕೊಳ್ಳಬಾರದು. ಈ ಸಮಯದಲ್ಲಿ ಓದಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರೆ ಸುಭದ್ರ ಜೀವನ ಕಟ್ಟಿಕೊಳ್ಳಬಹುದು ಎಂದು ಮಕ್ಕಳಿಗೆ ಹೇಳಿದರು. ಅನೇಕ ದೇಶಗಳಲ್ಲಿ ನಾನು ಪ್ರವಾಸ ಮಾಡಿದ್ದೇನೆ. ಆದರೆ, ನಮ್ಮ ದೇಶದಲ್ಲಿನ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಯಾವ ದೇಶದಲ್ಲೂ ಕಾಣಲಿಲ್ಲ. ಹಾಗಾಗಿ ನಮ್ಮ ದೇಶ ಸಂಸ್ಕೃತಿ-ಸಂಸ್ಕಾರದ ಭಂಡಾರವಾಗಿದೆ ಎಂದು ಹೇಳಿದರು.

ಪ್ರಾಧ್ಯಾಪಕ ಚೆನ್ನಪ್ಪ ಪಲ್ಲಾಗಟ್ಟೆ ಮಾತನಾಡಿ, ವಿದ್ಯಾರ್ಥಿಗಳ ಯೋಚನೆ ಹಾಗೂ ಚಿಂತನೆಗಳು ವಿಶಾಲವಾಗಿರಬೇಕು ಮತ್ತು ಪ್ರತಿ ವಿಷಯದಲ್ಲೂ ಗಂಭೀರ ಅಧ್ಯಯನ ಮುಖ್ಯ ಎಂದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಹೆಚ್. ಚಂದ್ರಪ್ಪ, ಎನ್‌ಎಸ್‌ಎಸ್ ಅಧಿಕಾರಿ ಡಾ. ಸುಭಾಷ್ ಆರ್ ಶಿಂಧೆ, ಗುಡ್ಡಪ್ಪ ಆರ್ ಓಲೇಕಾರ, ಕೆ.ಎಂ ಬಸವರಾಜ್, ಸೌಮ್ಯ, ಸಲ್ಮಾ ಎನ್. ಎಸ್. ಪರಮೇಶ್ವರಪ್ಪ ಇತರರು ಇದ್ದರು.

## ಸಚಿವೆ ನಿರ್ಮಲಾ ವಿರುದ್ಧದ ಎಫ್‌ಐಆರ್ ರದ್ದು

**(1ನೇ ಪುಟದಿಂದ)** ಅಧಿಕಾರಿಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದ ಬಿಜೆಪಿ ಪದಾಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಭಾರತೀಯ ನ್ಯಾಯಸಂಹಿತೆ ವಿಧಿ 384, 120ಬಿ ಹಾಗೂ 34ರ ಅಡಿ ಇವರುಗಳ ವಿರುದ್ಧ ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಆರೋಪಿಗಳು ಚುನಾವಣಾ ಬಾಂಡ್ ಹೆಸರಿನಲ್ಲಿ 8,000 ಕೋಟಿ ರೂ.ಗಳಿಗೂ ಅಧಿಕ ಲಾಭ ಪಡೆದಿದ್ದಾರೆ ಎಂದು ಆರೋಪಿಸಿ ಜೆಎಸ್‌ಪಿ ಸಹಸಂಸ್ಥಾಪಕ ಆರ್.ಆದರ್ಶ ಅಯ್ಯರ್ ಈ ದೂರು ದಾಖಲಿಸಿದ್ದರು. ತಮ್ಮ ಅಧೀನದಲ್ಲಿ ಬರುವ ಅಧಿಕಾರಗಳ ದುರ್ಬಳಕೆ ಮಾಡಿಕೊಂಡು ಕೇಂದ್ರ ಹಣಕಾಸು ಸಚಿವೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಚುನಾವಣೆಗಾಗಿ ಸಾವಿರಾರು ಕೋಟಿ ರೂ. ಸಂಗ್ರಹಿಸಿದ್ದಾರೆಂದು ಆರೋಪಿಸಲಾಗಿತ್ತು.

# ಅದಾನಿ ಪ್ರಕರಣ : ಜಂಟಿ ಸದನ ತನಿಖೆಗೆ ಆಗ್ರಹಿಸಿ ಸಂಸತ್ ಆವರಣದಲ್ಲಿ ಪ್ರತಿಭಟನೆ

ನವದೆಹಲಿ, ಡಿ. 3- ಅದಾನಿ ಲಂಚ ವಿವಾದವನ್ನು ಜಂಟಿ ಸದನ ತನಿಖೆಗೆ ಆಗ್ರಹಿಸಿ ವಿಪಕ್ಷಗಳ ಐಎನ್‌ಡಿಐಎ ಬಣದ ಸಂಸದರು ಸಂಸತ್ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಲಂಚ ಮತ್ತು ವಂಚನೆ ಪ್ರಕರಣದಲ್ಲಿ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಮತ್ತಿತರ ಕಂಪನಿಗಳ ಸಿಬ್ಬಂದಿ ವಿರುದ್ಧ ಅಮೆರಿಕ ಆರೋಪ ಪಟ್ಟಿ ದಾಖಲಿಸಿರುವ ಹಿನ್ನೆಲೆಯಲ್ಲಿ ಜಂಟಿ ಸದನ ಸಮಿತಿಯಿಂದ ತನಿಖೆ ನಡೆಯಬೇಕು ಎಂದು ಕಾಂಗ್ರೆಸ್ ಮತ್ತಿತರ ಪಕ್ಷಗಳು ಆಗ್ರಹಿಸಿದವು.

ಕಾಂಗ್ರೆಸ್, ಎಎಪಿ, ಆರ್ ಜೆಡಿ, ಶಿವಸೇನಾ (ಯುಬಿಟಿ) ಎಡರಂಗ ಸೇರಿದಂತೆ ಮತ್ತಿತರ ಪಕ್ಷಗಳ ಸಂಸದರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹೊಣೆಗಾರಿಕೆಗೆ ಒತ್ತಾಯಿಸಿದರು.

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಎಪಿಯ ಸಂಜಯ್ ಸಿಂಗ್, ಆರ್ ಜೆಡಿಯ ಮಿಶ್ರಾ ಭಾರತಿ ಮತ್ತು ಶಿವಸೇನೆಯ (ಯುಬಿಟಿ) ಅರವಿಂದ್ ಸಾವಂತ್ ಮತ್ತಿತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

## ರಾಜ್ಯಾಧ್ಯಕ್ಷರಾಗಿ ಸಂಗಮೇಶ್

**(1ನೇ ಪುಟದಿಂದ)** ಪತ್ರ ಬರಹಗಾರ ಡಿ.ಕೆ. ಸಂಗಮೇಶ್ ಎಲಿಗಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೃತ್ತಿಪರ ಪತ್ರ ಬರಹಗಾರರ ಅಸೋಸಿಯೇಷನ್ ವತಿಯಿಂದ ಸ್ಥಳೀಯ ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ನಿನ್ನೆ ನಡೆದ ರಾಜ್ಯದ ಎಲ್ಲಾ ಪತ್ರ ಬರಹಗಾರರ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳ ಪತ್ರ ಬರಹಗಾರರ ಕುಂದು-ಕೊರತೆಗಳ ಬಗ್ಗೆ ಸುದೀರ್ಘ ಚರ್ಚೆ ಸಭೆಯಲ್ಲಿ ನಡೆದು, ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪತ್ರ ಬರಹಗಾರರ ಒಕ್ಕೂಟವನ್ನು ರಾಜ್ಯ ಮಟ್ಟದಲ್ಲಿ ರಚಿಸಲು ತೀರ್ಮಾನ ಕೈಗೊಳ್ಳಲಾಯಿತು.

ವೃತ್ತಿಪರ ಪತ್ರ ಬರಗಾರರ ಅಸೋಸಿಯೇಷನ್‌ನ ದಾವಣಗೆರೆ ಜಿಲ್ಲಾಧ್ಯಕ್ಷರಾಗಿ ಡಿ.ಕೆ. ಸಂಗಮೇಶ್ ಎಲಿಗಾರ್ ಕಾರ್ಯ ನಿರ್ವಹಿಸುತ್ತಿದ್ದು ಅವರನ್ನು ರಾಜ್ಯಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಲು ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಲಾಯಿತು.

## ರೂ. ಮೌಲ್ಯ ಕುಸಿತ

**(1ನೇ ಪುಟದಿಂದ)** ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ ಇದಾಗಿದೆ. ಸೋಮವಾರ ರೂಪಾಯಿ ಮೌಲ್ಯವು 12 ಪೈಸೆಯಷ್ಟು ಕುಸಿದಿತ್ತು. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ 84.72ಗೆ ತಲುಪಿತ್ತು. ಬ್ರಿಕ್ಸ್ ರಾಷ್ಟ್ರಗಳು ಅಮೆರಿಕದ ಡಾಲರ್‌ನಿಂದ ಹಿಂದೆ ಸರಿಯಲು ನಿರ್ಧರಿಸಿದರೆ ಆ ದೇಶಗಳ ಆಮದುಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸಬೇಕಾಗುತ್ತದೆ ಎಂದು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದರು. ಇದರಿಂದ ಡಾಲರ್ ಮೌಲ್ಯವು ವೃದ್ಧಿಯಾಗಿದ್ದರೆ, ರೂಪಾಯಿ ಮೌಲ್ಯ ಇಳಿದಿದೆ. ವಿದೇಶಿ ಬಂಡವಾಳದ ಹೊರಹರಿವು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿದೆ.

# 2030ರ ವೇಳೆಗೆ ಏಡ್ಸ್ ಮುಕ್ತ ದೇಶ ಮಾಡಲು ಶ್ರಮಿಸೋಣ



**ಏಡ್ಸ್ ದಿನಾಚರಣೆ ಜಾಗೃತಿ ಜಾಥಾ**

ವಿಶ್ವ ಏಡ್ಸ್ ದಿನಾಚಾರಣೆಯ ಅಂಗವಾಗಿ ಜಿ 'ವಿಶ್ವ ಏಡ್ಸ್ ದಿನ-2024' ಜಾಥಾ ನಡೆಯಿತು. ಜಿಲ್ಲಾ ಚಿಗಟೇರಿ ಆಸ್ಪತ್ರೆ ಆವರಣಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಷಣ್ಮುಖಪ್ಪ ಜಾಥಾಕ್ಕೆ ಚಾಲನೆ ನೀಡಿದರು.

**(1ನೇ ಪುಟದಿಂದ)** ಜಾಗೃತಿ ಮೂಡಿಸ ಬೇಕು. ಈ ರೋಗಕ್ಕೆ ಚಿಕಿತ್ಸೆ ಇಲ್ಲ. ಆದರೆ ಬಾರದಂತೆ ತಡೆಯುವುದೊಂದೇ ಮಾರ್ಗ ಎಂದರು.

ಏಡ್ಸ್ ತಡೆಗೆ ಹಾಗೂ ಏಡ್ಸ್ ಸೋಂಕಿತರಲ್ಲಿ ಭರವಸೆ ಮೂಡಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಇವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕಾನೂನು ಸೇವಾ ಪ್ರಾಧಿಕಾರದಿಂದ ಬಡವರಿಗೆ ಉಚಿತವಾಗಿ ಕಾನೂನು ಸೇವೆ ನೀಡಲಾಗುತ್ತಿದೆ. ಏಡ್ಸ್ ಸೋಂಕಿತರಿಗೂ ಉಚಿತವಾಗಿ ವಕೀಲರ ಸೇವೆ ಒದಗಿಸಲಾಗುತ್ತದೆ ಎಂದು ಹೇಳಿದರು.

ಸೋಂಕಿತರನ್ನು ಸಾಮಾಜಿಕವಾಗಿ ದೂರವಿರಿಸುವುದು, ತಿರಸ್ಕರಿಸುವುದು ಸರಿಯಲ್ಲ. ಹೆಚ್‌ಐವಿ ಸೋಂಕಿತರು ವೈದ್ಯರ ಸಲಹೆಯಂತೆ ಸರಿಯಾದ ಕ್ರಮದಲ್ಲಿ ನಿತ್ಯ ಔಷಧ ಸೇವನೆಯಿಂದ ಹಾಗೂ ಆರೋಗ್ಯಕರ ಜೀವನ ಶೈಲಿ ಅನುಸರಿಸಿದರೆ ಸಾಮಾನ್ಯರಂತೆ ಬದುಕಬಹುದು ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಷಣ್ಮುಖಪ್ಪ ಮಾತಾ ನಾಡಿ, ಸೋಂಕಿತರಿಗೆ ಸಾಮಾಜಿಕ ಹಾಗೂ ಕೌಟುಂಬಿಕ ಬೆಂಬಲ ದೊರೆತಾಗ ಮಾತ್ರ, ಅವರೂ ಕೂಡ ಸಮಾಜದಲ್ಲಿ ಸಹಜ ಬದುಕು ಕಂಡುಕೊಳ್ಳಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಹೆಚ್.ಐ.ವಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಡಾ.ಸಂಜಯ್, ಇಎಸ್‌ಐ ಆಸ್ಪತ್ರೆಯ ವೈದ್ಯ ಡಾ.ರಾಕೇಶ್, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಕಾರ್ಯಕ್ರಮಧಿಕಾರಿ ಡಾ.ಪಿ.ಡಿ.ಮುರುಳೀಧರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ದೇವರಾಜ.ಪಿ. ಪಟಿಗೆ, ಜಿಲ್ಲಾ ಆರೋಗ್ಯ ಶಿಕ್ಷಣಧಿಕಾರಿ ಡಾ.ಸುರೇಶ್. ಎನ್.ಬಾರ್ಕಿ ಇತರರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಸಂಜೀವಿನಿ ಪಾಸಿಟಿವ್ ನೆಟ್ವರ್ಕ್, ಶ್ರೀ ದುರ್ಗಾಶಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ, ಅಭಯ ಸ್ಪಂದನ ಸ್ವಯಂ ಸೇವಾ ಸಂಸ್ಥೆ, ಜೆಪಿಎನ್‌ಜಿಎಸ್‌ಎಸ್ ಸಂಸ್ಥೆ, ಜಿಲ್ಲೆಯ ಎಲ್ಲಾ ರಕ್ತನಿಧಿ ಕೇಂದ್ರಗಳು, ಜಿಲ್ಲಾ ಆರ್.ಆರ್.ಸಿ ಕಾಲೇಜು, ಎನ್. ಸಿ.ಸಿ. ಮತ್ತು ಎನ್.ಎಸ್.ಎಸ್, ಘಟಕ, ಜಿಲ್ಲಾ ಎನ್.ವೈ.ಕೆ ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾನಿಲಯ ಇವರ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

## ನಗರದಲ್ಲಿ ಇಂದು ಕರವೇ ಪ್ರತಿಭಟನೆ

ದಾವಣಗೆರೆಯಿಂದ ಹದಡಿಗೆ ಹೋಗುವ ಮುಖ್ಯರಸ್ತೆ, ಜಯದೇವ ವೃತ್ತದಿಂದ ಬೈಪಾಸ್ ರಸ್ತೆಯವರೆಗೆ ಎಲ್ಲೆಂದರಲ್ಲಿ ಗುಂಡಿಗಳಾಗಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ಕೂಡಲೇ ದುರಸ್ತಿ ನಡೆಸುವಂತೆ ಆಗ್ರಹಿಸಿ ಇಂದು ಬೆಳಿಗ್ಗೆ 11-30ಕ್ಕೆ ಜಯದೇವ ವೃತ್ತದಿಂದ ಮೆರವಣಿಗೆ ಹೊರಟು ಲೋಕೋಪಯೋಗಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಕರವೇ ಜಿಲ್ಲಾಧ್ಯಕ್ಷ ಬಾಬುರಾವ್ ತಿಳಿಸಿದ್ದಾರೆ.


**ಡ್ರೈವರ್ ಬೇಕಾಗಿದ್ದಾರೆ**
ಕಾರ್/ಇನೋವಾದಲ್ಲಿ ಅನುಭವವಿರುವ, ಲೈಸನ್ಸ್ ಹೊಂದಿರುವವರು ಸಂಪರ್ಕಿಸಿ
ಬೆಳಗ್ಗೆ 11.30 ರಿಂದ 2.00ರವರೆಗೆ
08192 254736

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 120 ಅಡಿ ರಸ್ತೆ ಹಿಂಭಾಗ 40x60 ಸೌತ್ 40 ಅಡಿ ರಸ್ತೆಗೆ
ಓನರ್ : 96633 35235
ಮಧ್ಯವರ್ತಿಗಳಿಗೆ ಅವಕಾಶ ಇಲ್ಲ

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 40X60 ಉತ್ತರ, ಕಮರ್ಷಿಯಲ್ ಆಗುವಂತಹ, 120 ಅಡಿ ರಸ್ತೆಗೆ, 40x60 ಸೌತ್, 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಬನಶಂಕರಿ ಲೇಔಟ್‌ನಲ್ಲಿ 30x57 East, 40x60, 40x60 west ಅಕ್ಕ-ಪಕ್ಕ, 30x40 West 40 ಅಡಿ ರೋಡ್‌ಗಿದೆ.
99166 12110

**ತಕ್ಷಣ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 91648 98621

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆ ಕ್ಲಬ್ ಹತ್ತಿರ, ಪಾರ್ಕ್ ಹತ್ತಿರ 30x40 North, ಕೃಷಿ ಕೇಂದ್ರ ಹಿಂಭಾಗ 30x50 East, South ಕಾರ್ನರ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
ಆಯಾ ಕೆಲಸ - 01
ನೇರ ಸಂದರ್ಶನಕ್ಕೆ ಕರೆ ಮಾಡಿ
86186 42929

**ಸೈಟು ಮಾರಾಟಕ್ಕಿದೆ**
B.I.E.T. College ರಸ್ತೆ ಹಾಗೂ ಹೇಮಾವತಿ ಹಾಸ್ಟೆಲ್ ಎದುರು 3,200 ಅಡಿ ಅಳತೆಯ Corner ಸೈಟು ಮಾರಾಟಕ್ಕಿದೆ. ಈ ಸೈಟಿನಲ್ಲಿ ಸುಮಾರು ರೂ. 50,000/- ಬಾಡಿಗೆ ಬರುತ್ತಿದೆ.
ಸಂಪರ್ಕಿಸಿ: Mohan Real Estate Agencies
97424 34049

**ಬೇಕಾಗಿದ್ದಾರೆ**
ಶ್ರೀ ವೀರಭದ್ರೇಶ್ವರ ಅಸೋಸಿಯೇಟ್ಸ್ ಕರ್ನಾಟಕ ಸರ್ಕಾರದ ಇಲಾಖೆ, ದಾವಣಗೆರೆ ಕಚೇರಿಗೆ ಪದವೀಧರರು Ms-office + Online ಅನುಭವ ಇರಬೇಕು. ಸಂಪರ್ಕಿಸಿ : ಬಸವರಾಜಯ್ಯ ಕೆ.ಎಂ.
83102 94360
63603 93996

**ಬೇಕಾಗಿದ್ದಾರೆ**
ಸೇವಾ ಸಿಂಧುವಿನಲ್ಲಿ ಕಂಪ್ಯೂಟರ್ ಕೆಲಸದ ಅನುಭವವುಳ್ಳವರು ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
89516 67605

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಸ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಮ್ಯಾನೇಜರ್ ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಮ್ಯಾನೇಜರ್ ಬೇಕಾಗಿದ್ದಾರೆ. ಆಧಾರ್ ಕಾರ್ಡ್ ಜೆರಾಕ್ಸ್, ಪಾಸ್ ಪೋರ್ಟ್ ಸೈಜ್ ಫೋಟೋದೊಂದಿಗೆ ಸಂಪರ್ಕಿಸಿ : ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
54x40 ದಕ್ಷಿಣ ಮುಖ, ಇ-ಸ್ವತ್ತು, ಡೋರ್ ನಂ. ಇರುವ ಸೈಟ್ ಹದಡಿ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ದಾವಣಗೆರೆ.
83105 03746

**ಅಡಿಕೆ ತೋಟದ ರೈತ ಬಾಂಧವರೇ**
ಅಡಿಕೆ ಹಿಂಗಾರು ರೋಗಕ್ಕೆ ಕಾರಣವಾದ ರೋಗಾಣು (ಕೊಲೆಟೋ ಟ್ರಿಕಿಯಂ ಗ್ಲೋಯಸ್ಪೊರಿಡಿಯಸ್) ಇದರಿಂದ ಅಡಿಕೆ ಹಿಂಗಾರು ಒಣಗುವುದು ಮತ್ತು ಹಿಂಗಾರು ಕೊಳೆ ರೋಗ ಬರುತ್ತದೆ. ವೈಜ್ಞಾನಿಕವಾಗಿ ನಿಯಂತ್ರಿಸುವುದು ಹೇಗೆ ಎಂದು ಮಾಹಿತಿ ಕೊಡಲಾಗುವುದು ಹಾಗೂ ಅಡಿಕೆ ತೋಟದಲ್ಲಿ ಬೆಳೆಯುವ ಕಳೆಗಳಿಗೆ ನಮ್ಮಲ್ಲಿ ಸಾವಯವ ಕಳೆನಾಶಕ ದೊರೆಯುತ್ತದೆ.
ಸಂಪರ್ಕಿಸಿ : 98451 04109

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15,000 ವಸತಿ ಉಚಿತ. ಸಂಪರ್ಕಿಸಿ :
97400 98047

**ಮನೆ ಬಾಡಿಗೆಗೆ ಇದೆ**
#1885/65, 1ನೇ ಮೇನ್, 3ನೇ ಕ್ರಾಸ್, ಕುಂದುವಾಡ ರಸ್ತೆ, ಜೈನ್ ಲೇಔಟ್, ದಾವಣಗೆರೆ. (ಗ್ರಾಂಡ್ ಫ್ಲೋರ್) 2BHK ವಾಸದ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
97406 99932, 99027 48404

**ಮನೆ ಬಾಡಿಗೆಗೆ ಇದೆ**
(40x60) ರಂಗನಾಥ್ ಬಡಾವಣೆ, ವಿದ್ಯಾನಗರ ಲಾಸ್ಟ್ ಬಸ್‌ಸ್ಟಾಪ್ ಹತ್ತಿರ, 3 BHK, ಡ್ಯೂಪ್ಲೆಕ್ಸ್, ವೆಲ್ ಫರ್ನಿಷ್ಡ್, ಇನ್‌ಡಿಪೆಂಡೆಂಟ್ ಹೌಸ್, ಸೋಲಾರ್ ವಾಟರ್, ಸ್ವಂತ ಬೋರ್‌ವೆಲ್, ಗಾರ್ಡನ್ ಸೌಲಭ್ಯವಿದೆ.
97395 14877

**ಬೇಕಾಗಿದ್ದಾರೆ**
ಮೈಲಾರ ಲಿಂಗೇಶ್ವರ ನಗರ ಸಾರಿಗೆಗೆ ಡ್ರೈವರ್ ಮತ್ತು ಮಹಿಳಾ ಕಂಡಕ್ಟರ್ ಬೇಕಾಗಿದ್ದಾರೆ.
94484 42999
98448 42189

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠ್. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**2 BHK ಮನೆ ಲೀಜ್‌ಗೆ ಇದೆ**
1800Sqft fully furnished, CCTV, near to Bagirathi Kalyan Mantapa, P.B. Road, Harihar.
90088 00080

**ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಶಾಮನೂರು ರೋಡ್, ದಾವಣಗೆರೆ.
98861 66432

**ಬೇಕಾಗಿದ್ದಾರೆ**
ಆರ್ಡರ್ ಬುಕ್ಕಿಂಗ್ / ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಮನೆಯ ಅಡುಗೆ ಕೆಲಸಕ್ಕೆ ಅನುಭವವುಳ್ಳ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ವಿದ್ಯಾನಗರ, ಕಾಫಿ ಡೇ ಹತ್ತಿರ, ದಾವಣಗೆರೆ.
99457 64377, 9449973956

**ಓಂ ಗಣೇಶ ಆಪ್ಟಿಕಲ್ಸ್**
ಉತ್ತಮ ಗುಣಮಟ್ಟದ ಕನ್ನಡಕಗಳು ಹಾಗೂ ಸನ್ ಗ್ಲಾಸ್‌ಗಳು ಹೋಲ್‌ಸೇಲ್ ದರದಲ್ಲಿ ದೊರೆಯುತ್ತವೆ.
ಮಾಲೀಕರು, ಪ್ರೊ : ನಿಂಗೋಜಿ ಚೌಹಾಣ್ ಛತ್ರಪತಿ ಶಿವಾಜಿ
95350 02847

**ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
ಧರ್ಮಸ್ಥಳದಿಂದ ನೇರ ಪರಿಹಾರ
ಕೇರಳದ ನಂ. 1 ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಜಾತಕ ಫೋಟೋ ನೋಡಿ ಭವಿಷ್ಯವನ್ನು ನುಡಿಯುತ್ತಾರೆ. ಫೋನಿನ ಮೂಲಕ ಪರಿಹಾರ ಇದು ಚಮತ್ಕಾರ ಅಲ್ಲ, ಸಿದ್ಧಿ ಸಾಧಕರ ಸಾಧನೆ
ಪಂಡಿತ್ : ಮಂಜುನಾಥ್ ಗೂರೂಜಿ
99004 99659

## ಸದೃಢ ದೇಹದಲ್ಲಿ ಸದೃಢ ಮನಸ್ಸು



ದಾವಣಗೆರೆ, ಡಿ.3- ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಜೀವನ ಕೌಶಲ್ಯಗಳನ್ನು ಚಟುವಟಿಕೆಗಳ ಮೂಲಕ ಕಲಿಸುವುದರೊಂದಿಗೆ ಅವರ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಲಾಗುತ್ತಿದೆ ಎಂದು ಪೋದಾರ್ ಪ್ರೆಪ್ ಶಾಲೆ ಮುಖ್ಯ ಶಿಕ್ಷಕಿ ಕುಮಾರಿ ಮೊನಾಲಿಸಾ ಸಿಂಗ್ ಹೇಳಿದರು.

ಶಾಮನೂರಿನ ಜೆ. ಹೆಚ್. ಪಟೇಲ್ ಬಡಾವಣೆಯಲ್ಲಿರುವ ಪೋದಾರ್ ಪ್ರೆಪ್ ಶಾಲೆಯ ವಾರ್ಷಿಕ ಕ್ರೀಡಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪೋಷಕರಲ್ಲಿ ಹೆಚ್ಚಾಗಿ ಅಂಕಗಳ ಬಗ್ಗೆಯೇ ಅಧಿಕ ವ್ಯಾಮೋಹ ಇರುವುದು ಕಂಡುಬರುತ್ತಿದ್ದು, ಚಿಗುರುವ ವಯಸ್ಸಿನಿಂದಲೇ ಮಕ್ಕಳಿಗೆ ಕ್ರೀಡೆ ಹಾಗೂ ಕ್ರೀಡಾ ಸ್ಫೂರ್ತಿ ತುಂಬಬೇಕಾದುದು ಪೋಷಕರ ಆದ್ಯ ಕರ್ತವ್ಯವಾಗಿದೆ ಎಂದು ನುಡಿದರು. ಅಂತರರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟುಗಳು ಹಾಗೂ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಇಮ್ತಿಯಾಜ್ ಅಹ್ಮದ್ ಮಾತನಾಡಿದರು.

## ಪಿಜೆ ರಾಯರ ಮಠದಲ್ಲಿ ಧಾತ್ರಿ ಹವನ



ದಾವಣಗೆರೆ, ಡಿ.3- ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ 'ಧಾತ್ರಿ ಹವನ' ಮಹೋತ್ಸವವನ್ನು ಇದೇ ದಿನಾಂಕ 2 ರ ಸೋಮವಾರ ಪಂಡಿತ ಶ್ರೀ ಗೋಪಾಲಚಾರ್ ಮಣ್ಣೂರು ಇವರ ಪೌರೋಹಿತ್ಯ ಸಾರಥ್ಯದಲ್ಲಿ ಏರ್ಪಡಿಸಲಾಗಿತ್ತು.

ಈ ಮಹೋತ್ಸವನ್ನು ಮಠದ ವ್ಯವಸ್ಥಾಪಕ ಸುತೀರ್ಥಕಟ್ಟಿ ಅವರ ಪುತ್ರ ಡಾ. ವೆಂಕಟರಾಮ್ ಕಟ್ಟಿ ದಂಪತಿ ಹಾಗೂ ಅನೇಕ ಸದ್ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಸದರಿ ಮಹೋತ್ಸವದ ನಿಮಿತ್ತ ಮುಂಜಾನೆ 7.30 ರಿಂದ 8.30 ರವರೆಗೆ ವಾಯುಸ್ತುತಿ ಪಠಣ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಗುರುರಾಜ್ (ರಾಜಣ್ಣ), ಪ್ರಕಾಶ್ ನಾಡಿಗೇರ್, ಪಲ್ಲಕ್ಕಿ ವಾಸುದೇವಾಚಾರ್, ಶ್ಯಾಮ್ ಗಟ್ಟಿಕರ್, ಗುರುರಾಜ್ ಮಣ್ಣೂರ್, ಶ್ರೀ ಕೃಷ್ಣಚಾರ್, ಭರಮಸಾಗರದ ಬಿ.ಜೆ. ಅನಂತಪದ್ಮನಾಭ ರಾವ್, ಎಂ.ಬಿ. ಬದರಿನಾಥ್, ಆರ್.ಡಿ. ಕುಲಕರ್ಣಿ, ಸುಶೀಲೇಂದ್ರ ದೇವಳೆ ಮತ್ತು ಅನೇಕ ಸದ್ಭಕ್ತರು ಭಾಗವಹಿಸಿದ್ದರು.

## ರೈತರಿಗೆ ಹೆಚ್ಚಿನ ಅನುಕೂಲ ಮಾಡಿ : ಶಾಸಕ ಬಿ.ಪಿ ಹರೀಶ್



**ಹರಿಹರ**

ಹರಿಹರ, ಡಿ.3- ನಗರದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಸೋಮವಾರ ರೈತ ಮುಖಂಡರ ಹಾಗೂ ಬಗರ್ ಹುಕ್ಕುಂ ಸದಸ್ಯರ ಸಭೆ ನಡೆಯಿತು.

ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸರ್ಕಾರದ ನಿಬಂಧನೆಗಳ ಅನ್ವಯದಂತೆ ಮತ್ತು ಕಾನೂನು ಉಲ್ಲಂಘನೆ ಆಗದ ರೀತಿಯಲ್ಲಿ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ಇತ್ತೀಚೆಗೆ ತಂತ್ರಜ್ಞಾನ ವ್ಯವಸ್ಥೆ ಬಂದಾಗಿನಿಂದ ಸರ್ಕಾರ ಸಾಕಷ್ಟು ಮಾನದಂಡಗಳನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ಏನೇ ಮಾಡಿದರು ಸರ್ಕಾರದ ಮಾನದಂಡದ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕಿದೆ. ಹಾಗಾಗಿ ರೈತರು ಸಹಕರಿಸಬೇಕು ಎಂದು ಹೇಳಿದರು.

ಈ ವೇಳೆ ಬಗರ್ ಹುಕ್ಕುಂ ಸಮಿತಿ ಸದಸ್ಯರಾದ ಚಂದ್ರಶೇಖರ್ ಹರಳಹಳ್ಳಿ, ಎಳೆಹೊಳೆ ಕರಿಬಸಪ್ಪ, ಸವಿತಾ ವಾಸನ, ವಿ.ಎ. ಆನಂದ್, ಸಮೀರ್, ಅಧಿಕಾರಿಗಳು ಹಾಗೂ ರೈತ ಮುಖಂಡರು ಇದ್ದರು.

## ಉಚಿತ ಪರೀಕ್ಷಾ ಪೂರ್ವ ತರಬೇತಿ

ದಾವಣಗೆರೆ, ಡಿ.3- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಇಲ್ಲಿನ ರಾಮನಗರದ ಗಾಂಧಿ ಭವನದಲ್ಲಿ ಡಿ.9ರಿಂದ 19ರ ವರೆಗೆ ಕೆ.ಎ.ಎಸ್ ಪರೀಕ್ಷೆಯ ಉಚಿತ ಪರೀಕ್ಷಾ ಪೂರ್ವ ತರಬೇತಿ ಆಯೋಜಿಸಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಪರೀಕ್ಷಾರ್ಥಿಗಳು ಸದುಪಯೋಗ ಪಡೆಯಬಹುದು. ಮಾಹಿತಿಗಾಗಿ 7406323294 ಸಂಪರ್ಕಿಸಿ.

# ಶೋಕಾಸ್ ನೋಟಿಸ್‌ಗೆ ಖುದ್ದು ಉತ್ತರಿಸಲು ದೆಹಲಿಗೆ ಬಿಜೆಪಿ ಭಿನ್ನರ ತಂಡ

ಬೆಂಗಳೂರು, ಡಿ. 3- ಪಕ್ಷ ಮತ್ತು ರಾಜ್ಯ ನಾಯಕರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡುತ್ತಾ, ಬಂಡಾಯ ಎದ್ದಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಕೇಂದ್ರ ಬಿಜೆಪಿ ನೀಡಿರುವ ಶೋಕಾಸ್ ನೋಟಿಸ್‌ಗೆ ಖುದ್ದು ಉತ್ತರ ನೀಡಲು ಭಿನ್ನರ ತಂಡ ತೆರಳಿದೆ.

ಯತ್ನಾಳ್ ಜೊತೆ ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಕುಮಾರ್ ಬಂಗಾರಪ್ಪ ಸೇರಿದಂತೆ ಕೆಲವು ನಾಯಕರು ದೆಹಲಿಗೆ ತೆರಳಿದ್ದಾರೆ.

ನಾಳೆ ಬೆಳಗ್ಗೆ 11-30ಕ್ಕೆ ಭೇಟಿ ಸಮಯ ನೀಡಲಾಗಿದೆ ಎಂದು ರಮೇಶ್ ಜಾರಕಿಹೊಳಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಒಂದು ವೇಳೆ ಭೇಟಿ ಸಾಧ್ಯವಾಗದಿದ್ದರೆ, ಮುಂದೊಂದು ದಿನ ಬರುವುದಾಗಿಯೂ ತಿಳಿಸಿದರು.

ಬಿಜೆಪಿ ಶಿಸ್ತು ಸಮಿತಿ ಮುಂದೆ ನಮ್ಮ ಅಹವಾಲುಗಳನ್ನು ಮಂಡಿಸಲಿದ್ದು, ನಮ್ಮ ತಪ್ಪಿದ್ದರೆ ತಿದ್ದಿಕೊಳ್ಳಲು ಸಿದ್ಧರಿದ್ದೇವೆ ಎಂದರು.

ಈ ಮಧ್ಯೆ ನೋಟಿಸ್ ತಲುಪಿದ 10 ದಿನಗಳೊಳಗಾಗಿ ಉತ್ತರ ನೀಡುವಂತೆ ಗಡುವು ನೀಡಲಾಗಿದ್ದು, ಹಿಂದಿನ ಎಚ್ಚರಿಕೆಗಳಿಂದ ಸರಿಪಡಿಸಿಕೊಳ್ಳದೆ, ಪಕ್ಷದ ರಾಜ್ಯ ನಾಯಕರ ವಿರುದ್ಧ ಮಾತು ಮುಂದುವರೆಸಿರುವುದಕ್ಕೆ ಶಿಸ್ತು ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ವರಿಷ್ಠರ ನೋಟಿಸ್‌ಗೆ ನಿನ್ನೆಯೇ ಯತ್ನಾಳ್ ಎರಡು ಪ್ರತ್ಯೇಕ ಟ್ವೀಟ್ ಮಾಡಿ, ನನಗೆ ಇದುವರೆಗೂ ಯಾವುದೇ ಅಧಿಕೃತ ನೋಟಿಸ್ ಬಂದಿಲ್ಲ, ವಾಟ್ಸ್‌ಆಪ್‌ನಲ್ಲಿ ಬಂದಿದೆ ಎಂದಿದ್ದರು, ಆದರೆ, ಇಂದು ಸ್ವಯಂ ದೆಹಲಿಯಲ್ಲಿದ್ದು, ನೋಟಿಸ್‌ಗೆ ಉತ್ತರಿಸಲು ಮುಂದಾಗಿದ್ದಾರೆ.

ಯತ್ನಾಳ್ ನೇತೃತ್ವದ ಭಿನ್ನರ ತಂಡ ಸಮಾಲೋಚನೆಯಲ್ಲಿ ತೊಡಗಿದ್ದು, ಶಿಸ್ತು ಸಮಿತಿ ಮುಂದೆ ಏನು ಹೇಳಬೇಕು ಎಂಬ ತಯಾರಿ ನಡೆಸಿದೆ. ಏನೇ ಆದರೂ, ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲೇಬೇಕೆಂಬುದು ಈ ತಂಡದ ಹಠವಾಗಿದೆ. ವಿಜಯೇಂದ್ರ ಪರವಾಗಿ ಎಲ್ಲೋ ಕೆಲವು ನಾಯಕರು ಮಾತ್ರ ಇದ್ದು, ಉಳಿದವರು ತಮ್ಮೊಂದಿಗಿದ್ದಾರೆ ಎಂದು ಯತ್ನಾಳ್ ಪರ ತಂಡ ವಾದ ಮಾಡುತ್ತಿದೆ.

## ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳದನಲ್ಲಿ ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ ನೀಡಿ

ಬೆಂಗಳೂರು, ನ. 30- ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಲ್ಯಾಣ ಕರ್ನಾಟಕದ ಸಾಹಿತಿಗಳು, ಕಲಾವಿದರಿಗೆ ಆದ್ಯತೆ ನೀಡುವಂತೆ ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಮನವಿ ಮಾಡಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಸಿ.ಎನ್. ಭಂಡಾರೆ ಪತ್ರ ಬರೆದಿದ್ದು, ಕಲ್ಯಾಣ ಕರ್ನಾಟಕ ಕೇವಲ ಅಭಿವೃದ್ಧಿ ದೃಷ್ಟಿಯಿಂದಷ್ಟೇ ಹಿಂದುಳಿದಿಲ್ಲ. ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿಯೂ ಉಪೇಕ್ಷೆಯಿಂದ ಕಾಣಲಾಗುತ್ತಿದೆ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಸಾಂಸ್ಕೃತಿಕ ಬೆಳವಣಿಗೆಯು ಅಭಿವೃದ್ಧಿಯ ಒಂದು ಭಾಗವೆಂದು ಹೇಳಲಾಗಿದೆ.

ಆದ್ದರಿಂದ ಕಲ್ಯಾಣ ಕರ್ನಾಟಕ ಸಾಹಿತಿಗಳಿಗೆ, ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಿ, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳಬೇಕು ಎಂದಿದ್ದಾರೆ. ಈ ಹಿಂದೆ ನಡೆದ ಸಮ್ಮೇಳನಗಳಲ್ಲಿ ಕಲ್ಯಾಣ ಕರ್ನಾಟಕದ ಸಾಹಿತಿಗಳಿಗೆ, ಕಲಾವಿದರಿಗೆ ಪ್ರಾಶಸ್ತ್ಯ ನೀಡಿರಲಿಲ್ಲ ಎಂದು ತಿಳಿಸಿದ್ದಾರೆ.

## ಜನಜಾಗೃತಿ ಹೋರಾಟದಲ್ಲಿ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ



ದಾವಣಗೆರೆ, ಡಿ.3- ರಾಜ್ಯದಲ್ಲಿ ವಕ್ಫ್ ಬೋರ್ಡಿನ ಮೂಲಕ ರೈತರ ಕೃಷಿ ಭೂಮಿ, ಮಠ ಹಾಗೂ ದೇವಸ್ಥಾನದ ಜಮೀನುಗಳನ್ನು ಅಕ್ರಮವಾಗಿ ಕಬಳಿಸುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಳಗಾವಿಯಲ್ಲಿ ಭಾನುವಾರ ನಡೆದ ಜನಜಾಗೃತಿ ಹೋರಾಟದಲ್ಲಿ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಭಾಗವಹಿಸಿದ್ದರು.

ಈ ವೇಳೆ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳೆ, ಬಿ.ಪಿ. ಹರೀಶ್, ಎಂ. ಚಂದ್ರಪ್ಪ, ಮಾಜಿ ಸಂಸದ ಪ್ರತಾಪಸಿಂಹ, ಮಾಜಿ ಶಾಸಕರಾದ ಕುಮಾರ್ ಬಂಗಾರಪ್ಪ, ಅರವಿಂದ್ ಲಿಂಬಾವಳಿ, ಮುಖಂಡ ಎನ್.ಆರ್. ಸಂತೋಷ್ ಇತರರು



## ಜುಮ್ಮಾ ಮಸೀದಿಯ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರ

**ಮಲೇಬೆನ್ನೂರು**

ಮಲೇಬೆನ್ನೂರು, ಡಿ. 3 - ಇಲ್ಲಿನ ಜುಮ್ಮಾ ಮಸೀದಿಗೆ ನೂತನವಾಗಿ ಆಯ್ಕೆಯಾಗಿರುವ ಆಡಳಿತ ಮಂಡಳಿಯ ಪದಾಧಿಕಾರಿಗಳಿಗೆ ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ವತಾಜಮ್ ಪಾಷಾ ಅವರು ಶನಿವಾರ ಅಧಿಕಾರ ವಹಿಸಿಕೊಟ್ಟರು. ಜುಮ್ಮಮಸೀದಿಯ ನೂತನ ಮುತುವಲ್ಲಿ ಎಂ.ಬಿ. ಹಾಶಮ್, ಉಪಾಧ್ಯಕ್ಷ ಸೈಯದ್ ಸಾಬೀರ್ ಅಲಿ, ಕಾರ್ಯದರ್ಶಿ ದಾದಾವಲಿ ಖಜಾಂಚಿ ಯುಸೂಫ್ ಖಾನ್ ಸದಸ್ಯರಾದ ಡಿ. ಭಾಷಾ, ಅನ್ವರ್ ಬಾಷಾ, ಸುಲ್ತಾನ್ ಈ ವೇಳೆ ಹಾಜರಿದ್ದು ಅಧಿಕಾರ ವಹಿಸಿಕೊಂಡರು.

## ರಾಷ್ಟ್ರೀಯ ಸ್ಕ್ಯಾಯ್ ಪಂದ್ಯಾವಳಿಗೆ ಹೊನ್ನಾಳಿಯ ರೋಹಿಣಿ ಆಯ್ಕೆ



ಹೊನ್ನಾಳಿ, ಡಿ. 3 - ಇತ್ತೀಚೆಗೆ ಹರಿಹರದ ಗುರುಭವನದಲ್ಲಿ ಸ್ಕ್ಯಾಯ್ ಅಸೋಸಿಯೇಷನ್ ಆಫ್ ಕರ್ನಾಟಕ ಆಯೋಜಿಸಿದ್ದ ರಾಜ್ಯ ಸ್ಕ್ಯಾಯ್ ಕ್ರೀಡೆ ಆಯ್ಕೆ ಪ್ರಕ್ರಿಯೆಯಲ್ಲಿ ಹೊನ್ನಾಳಿ ತಾಲ್ಲೂಕಿನ ಮೇಘನಾ ಮಹೇಶ್ವರಪ್ಪ ದಂಪತಿಯ ಪುತ್ರಿ ಶ್ರೀ ಸಾಯಿ ಗುರುಕುಲ ಶಾಲೆಯ ವಿದ್ಯಾರ್ಥಿನಿ ರೋಹಿಣಿ ಭಾಗವಹಿಸಿ 25ನೇ ರಾಷ್ಟ್ರೀಯ ಸ್ಕ್ಯಾಯ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

14 ವರ್ಷ ವಯೋಮಿತಿ ಒಳಗಿನ ಬಾಲಕಿಯರ ಲೋಬೋ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಡಿ. 7, 8 ಮತ್ತು 9 ರಂದು ಹರಿಯಾಣದ ಪುಂಚಕುಲದಲ್ಲಿ ಸ್ಕ್ಯಾಯ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಲಿರುವ 25ನೇ ರಾಷ್ಟ್ರೀಯ ಸ್ಕ್ಯಾಯ್ ಪಂದ್ಯಾವಳಿಗೆ ಆಯ್ಕೆಯಾಗಿರುವ ರೋಹಿಣಿ, ಹೊನ್ನಾಳಿ ತಾಲ್ಲೂಕಿನಿಂದ ಈ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವ ಮೊದಲ ಕ್ರೀಡಾಪಟುವಾಗಿದ್ದಾರೆ. ರೋಹಿಣಿಯನ್ನು ಕೋಚ್ ರಮೇಶ್ ಮತ್ತು ಸ್ಕ್ಯಾಯ್ ಅಸೋಸಿಯೇಷನ್ ಆಫ್ ಕರ್ನಾಟಕದ ಉಪಾಧ್ಯಕ್ಷ ಶಿವಮೊಗ್ಗ ವಿನೋದ್ ಅಭಿನಂದಿಸಿದ್ದಾರೆ.

# ಕನ್ನಡ ಸಾಹಿತ್ಯ ಸಮ್ಮೇಳನದ 'ವಿಶೇಷ ಪ್ರತಿನಿಧಿ' ನೋಂದಣಿ ದಿನಾಂಕ ವಿಸ್ತರಣೆ

ಬೆಂಗಳೂರು, ಡಿ.3- ಮಂಡ್ಯದಲ್ಲಿ ಇದೇ ದಿನಾಂಕ 20, 21 ಮತ್ತು 22 ರಂದು ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಆಸಕ್ತಿ ಇರುವವರಿಗೆ 'ವಿಶೇಷ ಪ್ರತಿನಿಧಿ' ನೋಂದಣಿಗಾಗಿ ಆನ್‌ಲೈನ್ ವ್ಯವಸ್ಥೆ ಮಾಡಲಾಗಿದ್ದು, ಒಟ್ಟು ಐದು ಸಾವಿರ ಪ್ರತಿನಿಧಿಗಳಿಗೆ ಈ ಮೊದಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಈಗಾಗಲೆ 4,077 ಕನ್ನಡಿಗರು ಪ್ರತಿನಿಧಿಗಳಾಗಿ ನೊಂದಣಿ ಮಾಡಿಕೊಂಡಿದ್ದು ಅಪಾರ ಸಂಖ್ಯೆಯಲ್ಲಿ ಆಸಕ್ತರು ಪ್ರತಿನಿಧಿಗಳಾಗಲು ಆಸಕ್ತಿ ತೋರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಅವರು ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಮತ್ತು ಕೊನೆಯ ದಿನಾಂಕವನ್ನು ವಿಸ್ತರಿಸುವಂತೆ ಸಂಬಂಧಪಟ್ಟ ಸಮಿತಿ ಮತ್ತು ಜಿಲ್ಲಾಡಳಿತದ ಜೊತೆಗೆ ನಡೆಸಿದ ಚರ್ಚೆಯ ಫಲವಾಗಿ ಈಗ ಒಟ್ಟು ಆರು ಸಾವಿರ ಪ್ರತಿನಿಧಿಗಳಿಗೆ ಈಗ ಅವಕಾಶ ಕಲ್ಪಿಸಲಾಗಿದ್ದು ಕೊನೆಯ ದಿನಾಂಕವನ್ನು ಡಿಸೆಂಬರ್ 7 ರ ಶನಿವಾರಕ್ಕೆ ವಿಸ್ತರಿಸಲಾಗಿದೆ.

ಅತಿಥ್ಯಕ್ಕೆ ಹೆಸರಾದ ಮಂಡ್ಯದ ಪರಂಪರೆಯ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ನೊಂದಾಯಿತ ಪ್ರತಿನಿಧಿಗಳಿಗೆ ಬ್ಯಾಗ್, ನೋಟ್ ಪ್ಯಾಡ್, ಪೆನ್, ಅಧ್ಯಕ್ಷರ ಭಾಷಣ, ಸಮ್ಮೇಳನದ ಆಹ್ವಾನ ಪತ್ರಿಕೆ, ಅರ್ಧ ಕೆ.ಜಿ ಸಕ್ಕರೆ ಮತ್ತು ಬೆಲ್ಲ ಹಾಗೂ ಗುರುತಿನ ಚೀಟಿಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಿದೆ.

ಆಸಕ್ತರು ಅಂತರ್ಜಾಲ ತಾಣ https://kannadasahithyaparishattu.in/sammelana2024/ ಕ್ಕೆ ಭೇಟಿ ಮಾಡಿ ನೋಂದಾಯಿಸಿಕೊಳ್ಳ ಬಹುದಾಗಿದೆ. ನೋಂದಣಿಗೆ ಸಂಖ್ಯಾಮಿತಿಯಿದ್ದು ಸ್ವಯಂಚಾಲಿತವಾಗಿ ತಂತ್ರಾಂಶವು ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಿರುತ್ತದೆ. ಆದ್ದರಿಂದ ನೋಂದಣಿ ಮಾಡಿಸುವುದರ ಮೂಲಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಸಹಕರಿಸಬೇಕೆಂದು ಕಸಾಪ ಅಧ್ಯಕ್ಷ ಡಾ.ಮಹೇಶ ಜೋಶಿ ಕೋರಿದ್ದಾರೆ.

# ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಆಂತರಿಕ ದೂರು ಸಮಿತಿ ರಚನೆಗೆ ಸುಪ್ರೀಂ ಸೂಚನೆ

ನವದೆಹಲಿ, ಡಿ.3- ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸುವಂತೆ ಸುಪ್ರೀಂ ಕೋರ್ಟ್ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

'ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹಾರ) ಕಾಯ್ದೆ– 2013' ದೇಶದಾದ್ಯಂತ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಬೇಕು ಎಂಬ ಉದ್ದೇಶದಿಂದ ಈ ಸೂಚನೆ ನೀಡಲಾಗಿದೆ.

ಈ ಸಂಬಂಧ ಮಂಗಳವಾರ ಕೆಲವು ನಿರ್ದೇಶನಗಳನ್ನು ನೀಡಿರುವ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ವಿಭಾಗೀಯ ಪೀಠವು, ಕಾಯ್ದೆಯನ್ನು ದೇಶದ ಎಲ್ಲೆಡೆ ಏಕರೂಪದಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದೆ.

ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶದ ಸರ್ಕಾರಗಳು ಪ್ರತಿ ಜಿಲ್ಲೆಗೆ ಒಬ್ಬ ಅಧಿಕಾರಿಯನ್ನು ಡಿಸೆಂಬರ್ 31ಕ್ಕೆ ಮೊದಲು ನೇಮಕ ಮಾಡಬೇಕು. ಆ ಅಧಿಕಾರಿಯು ಸ್ಥಳೀಯ ದೂರು ಸಮಿತಿಯನ್ನು ಜನವರಿ 31ಕ್ಕೆ ಮೊದಲು ರಚಿಸಬೇಕು, ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಕೋರ್ಟ್ ಸೂಚಿಸಿದೆ.

ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸಲಾಗಿದೆಯೇ ಎಂಬ ಬಗ್ಗೆ ಜಿಲ್ಲಾಧಿಕಾರಿಗಳು/ಜಿಲ್ಲಾ ಮ್ಯಾಜಿಸ್ಟ್ರೇಟರು ಸಮೀಕ್ಷೆ ನಡೆಸಬೇಕು, ವರದಿಯನ್ನು ಸಲ್ಲಿಸಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

ತನ್ನ ಸೂಚನೆಗಳ ಪಾಲನೆಗೆ ಸುಪ್ರೀಂ ಕೋರ್ಟ್ ಮಾರ್ಚ್ 31ರವರೆಗೆ ಸಮಯಾವಕಾಶ ನೀಡಿದೆ, ಸೂಚನೆಗಳನ್ನು ಅನುಷ್ಠಾನಕ್ಕೆ ತರುವ ಕಾರ್ಯದ ಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿ ನಿಗಾ ಇರಿಸಬೇಕು ಎಂದು ಹೇಳಿದೆ.

## ದೇಹದಾರ್ಢ್ಯ ಸ್ಪರ್ಧೆ; ರಾಷ್ಟ್ರ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಡಿ.3- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ದಾವಣಗೆರೆ ವಿಶ್ವವಿದ್ಯಾಲಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ 90 ಕೆಜಿ ವಿಭಾಗದಲ್ಲಿ ರಾಘವೇಂದ್ರ ಚಿನ್ನದ ಪದಕ ಗೆಲ್ಲುವ ಮೂಲಕ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ನಗರದ ಜಿಎಫ್‌ಜಿಸಿ ಕಾಲೇಜಿನಲ್ಲಿ ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದಿಂದ ದೇಹದಾರ್ಢ್ಯ ಸ್ಪರ್ಧೆ ಹಾಗೂ ಆಯ್ಕೆಗಳು ನಡೆದವು. ಕಾಲೇಜಿನಲ್ಲಿ ಪ್ರಥಮ ಬಿಎ ವ್ಯಾಸಂಗ ಮಾಡುತ್ತಿರುವ ರಾಘವೇಂದ್ರ, ಹಳೇ ಕುಂದುವಾಡದ ಬಸವರಾಜ್, ಲಕ್ಷ್ಮೀದೇವಿ ದಂಪತಿಯ ಪುತ್ರನಾಗಿದ್ದು, ಸ್ಪರ್ಧೆಯಲ್ಲಿ 90 ಕೆಜಿ ವಿಭಾಗದಲ್ಲಿ ದೇಹ ಪ್ರದರ್ಶಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾನೆ.

ಓದಿನ ಜೊತೆಗೆ ತನ್ನ ತಂದೆಯ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಾ ತನ್ನ ಕನಸನ್ನು ನನಸು ಮಾಡಿಕೊಳ್ಳಲು ಬಿಡುವಿನ ವೇಳೆಯಲ್ಲಿ ಕೋಚ್ ಮಧು ಪೂಜಾರ್ ಮಾರ್ಗದರ್ಶನದಲ್ಲಿ ದೇಹ ಹುರಿಗೊಳಿಸಿ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಗಳಿಸಿದ್ದಾನೆ. ಸ್ಪರ್ಧೆಯಲ್ಲಿ ಬೈಸಿಪ್ಸ್, ಲ್ಯಾಟ್ ಸ್ಪ್ರೆಡ್ ಪೋಸ್ ಕೊಟ್ಟು ನೋಡುಗರನ್ನು, ತೀರ್ಪುಗಾರರನ್ನು ಬೆರಗುಗೊಳಿಸಿದ್ದಾನೆ. ರಾಘವೇಂದ್ರನ ದೇಹ ಪ್ರದರ್ಶನ ವೇಳೆ ಶಿಳ್ಳೆ, ಚಪ್ಪಾಳೆ ಕೇಳಿ ಬಂದವು,

ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದು ಬರುವ ಫೆಬ್ರುವರಿಯಲ್ಲಿ ಮಂಗಳೂರಿನಲ್ಲಿ ಸ್ಪರ್ಧೆ ನಡೆಯಲಿದೆ. ಚಿನ್ನದ ಪದಕ ಗೆದ್ದಿರುವ ರಾಘವೇಂದ್ರನಿಗೆ ಕಾಲೇಜು ಆಡಳಿತ ಮಂಡಳಿ, ಮಾರ್ಗದರ್ಶಕರು, ಹಳೇ ಕುಂದುವಾಡ ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ರೈತರ, ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಎಚ್ಚರಿಕಾ ರ್‍ಯಾಲಿ



ದಾವಣಗೆರೆ, ಡಿ.3- ಸಂಯುಕ್ತ ರೈತ ಹೋರಾಟ ಸಮಿತಿ ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವತಿಯಿಂದ ಕೇಂದ್ರ ಸಮಿತಿ ಕರೆಯ ಮೇರೆಗೆ ನಡೆದ, ರೈತರ ಮತ್ತು ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಒತ್ತಾಯಿಸಿ ಎಚ್ಚರಿಕಾ ರ್‍ಯಾಲಿಯು ಅಂಬೇಡ್ಕರ್ ಸರ್ಕಲ್‌ನಿಂದ ಆರಂಭವಾಗಿ ಜಯದೇವ ಸರ್ಕಲ್, ಅಶೋಕ ರಸ್ತೆ, ಮಹಾತ್ಮ ಗಾಂಧಿ ಸರ್ಕಲ್, ಹಳೆ ಬಸ್ ನಿಲ್ದಾಣದ ರಸ್ತೆ ಮೂಲಕ ಸಾಗಿ ದಾವಣಗೆರೆ ಉಪ ವಿಭಾಗಾಧಿಕಾರಿಗಳ ಕಚೇರಿ ಬಳಿ ತೆರಳಿ ಅಲ್ಲಿ ಮಾನವ ಸರಪಳಿ ನಿರ್ಮಿಸಿ ನಂತರ ಬಹಿರಂಗ ಸಭೆ ನಡೆಸಿ ಉಪ ವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಯವರಿಗೆ ಕಳುಹಿಸಲು ಮನವಿ ಸಲ್ಲಿಸಲಾಯಿತು.

## 7ಕ್ಕೆ ಪಾಲಿಕೆ ಆಯ-ವ್ಯಯ ಸಭೆ

ದಾವಣಗೆರೆ, ಡಿ.3- ಮಹಾನಗರಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಇದೇ ದಿನಾಂಕ 7ರ ಬೆಳಗ್ಗೆ 11ಕ್ಕೆ 2025-26ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿ ತಯಾರಿಸಲು ಸಲಹೆ ಪಡೆಯಲು ಮೊದಲನೆ ಸಭೆ ಕರೆಯಲಾಗಿದೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

# ಸಾಲು... ಸಾಲು... ಸಂಭ್ರಮೋತ್ಸವದಲ್ಲಿ ಡಾ. ಬಿ.ಎಸ್. ನಾಗಪ್ರಕಾಶ್

ಇ.ಎಂ. ಮಂಜುನಾಥ

- **ವೃತ್ತಿ ಜೀವನದ ವೈದ್ಯಕೀಯ ಸೇವೆಗೆ 50ನೇ ವರ್ಷದ ಸುವರ್ಣ ಮಹೋತ್ಸವದ ಸಂಭ್ರಮ**
- **ವೈವಾಹಿಕ ಜೀವನದ 50ನೇ ವರ್ಷದ ಸುವರ್ಣ ಮಹೋತ್ಸವದ ಸಂಭ್ರಮ**
- **ಸಾಮಾಜಿಕ ಸೇವೆಯ 50ನೇ ವರ್ಷದ ಸುವರ್ಣ ಮಹೋತ್ಸವದ ಸಂಭ್ರಮ**
- **ಜೀವನ ಆಧಾರ ಸ್ತಂಭ ಆಸ್ಪತ್ರೆಗೆ 44ನೇ ವರ್ಷಾಚರಣೆಯ ಸಂಭ್ರಮ**
- **ಸಾರ್ಥಕ ಜೀವನಕ್ಕೆ 77ರ ವರ್ಷಾಚರಣೆಯ ಸಂಭ್ರಮ**

-ಈ ಸಾಲು... ಸಾಲು... ಸಂಭ್ರಮೋತ್ಸವದಲ್ಲಿ ದಾವಣಗೆರೆ ಜಿಲ್ಲೆಯ ಹಿರಿಯ ವೈದ್ಯ ಡಾ. ಬಿ.ಎಸ್. ನಾಗಪ್ರಕಾಶ್, 2024-25ರ ಸಾಲಿನ ಎರಡ್ಮೂರು ತಿಂಗಳ ಅವಧಿಯಲ್ಲಿ ಈ ಎಲ್ಲಾ ಸಂಭ್ರಮಗಳನ್ನು ಆಚರಿಸಿಕೊಳ್ಳುವುದರ ಮೂಲಕ ಸಾರ್ಥಕ ಜೀವನವನ್ನು ಕಣ್ತುಂಬಿಕೊಂಡು, ವಿಜೃಂಭಿಸುತ್ತಿರುವುದು ಅವರ ಪಾಲಿಗೆ ಪರಮ ಅದೃಷ್ಟವೆಂದರೆ ಅತಿಶಯೋಕ್ತಿಯಾಗಲಾರದು.

**ಸಂಕ್ಷಿಪ್ತ ಪರಿಚಯ:** ಮೂಲತಃ ದಾವಣಗೆರೆಯವರೇ ಆದ ಕೀರ್ತಿಶೇಷರಾದ ಶ್ರೀ ಬಿ.ವಿ. ಸತ್ಯನಾರಾಯಣ ಶೆಟ್ಟಿ ಮತ್ತು ಶ್ರೀಮತಿ ಬಿ.ಎಸ್. ನಾಗರತ್ನಮ್ಮ ದಂಪತಿ ಪುತ್ರರಾಗಿ 1948, ಡಿಸೆಂಬರ್ 4ರಂದು ಜನಿಸಿದ ನಾಗಪ್ರಕಾಶ್, ಎಂಬಿಬಿಎಸ್., ಎಂ.ಎಸ್. ಪದವೀಧರರಾಗಿದ್ದು, 77ನೇ ವರ್ಷದ ಸಂಭ್ರಮದಲ್ಲಿದ್ದಾರೆ.

1975, ಫೆಬ್ರವರಿ 17 ರಂದು ಶ್ರೀಮತಿ ಪದ್ಮ ಅವರೊಂದಿಗೆ ವೈವಾಹಿಕ ಜೀವನಕ್ಕೆ ಪಾದಾರ್ಪಣೆ ಮಾಡಿದ ಅವರು, ಪುತ್ರ ಡಾ. ಅಭಿಷೇಕ್, ಪುತ್ರಿ ಶ್ರೀಮತಿ ಸ್ಮಿತಾ, ಸೊಸೆ, ಅಳಿಯ, ನಾಲ್ವರು ಮೊಮ್ಮಕ್ಕಳೊಂದಿಗೆ ಸುಖೀ ಕುಟುಂಬವನ್ನು ಹೊಂದಿದ್ದು, 50ನೇ ವರ್ಷದ ಮದುವೆ ವಾರ್ಷಿಕೋತ್ಸದ ಸಂಭ್ರಮದಲ್ಲಿದ್ದಾರೆ.

1974, ಡಿಸೆಂಬರ್‌ನಲ್ಲಿ ದಾವಣಗೆರೆ ಹಳೇ ಭಾಗದ ಎಸ್.ಕೆ.ಪಿ. ರಸ್ತೆಯಲ್ಲಿ ಶ್ರೀಕಾಂತ್ ಕ್ಲಿನಿಕ್ ಆರಂಭಿಸುವುದರ ಮೂಲಕ ತಮ್ಮ ವೈದ್ಯಕೀಯ ವೃತ್ತಿ ಜೀವನವನ್ನು ಆರಂಭಿಸಿದ ಅವರು, 1980 ಡಿಸೆಂಬರ್ 10 ರಂದು ಯುನಿಟಿ ಹೆಲ್ತ್ ಸೆಂಟರ್ ಪ್ರಾರಂಭಿಸುವುದರ ಮೂಲಕ ಅಂದಿನ ದಿನಗಳಲ್ಲಿ ದಾವಣಗೆರೆ ಹಳೇ ಊರಿನಲ್ಲಿ ಅತ್ಯಾಧುನಿಕ ಪಾಲಿಕ್ಲಿನಿಕ್ ಮತ್ತು ನರ್ಸಿಂಗ್ ಹೋಂ ಸ್ಥಾಪನೆ ಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಆ ಆಸ್ಪತ್ರೆಗೀಗ 44ರ ಸಂಭ್ರಮ.

1973ರಲ್ಲಿ ವೈದ್ಯಕೀಯ ಪದವಿ ಪಡೆದು 1978ರಲ್ಲಿ ಮೈಸೂರಿನಲ್ಲಿ ಉನ್ನತ ಪದವಿ (ಎಂ.ಎಸ್.) ಮುಗಿಸಿದ ಅವರು ವೈದ್ಯಕೀಯ ಕಾಲೇಜಿನಲ್ಲಿ ಉಪನ್ಯಾಸಕರಾಗುವ ಆಸೆ ಹೊತ್ತಿದ್ದರಾದರೂ, ನರ್ಸಿಂಗ್ ಹೋಂ ಸ್ಥಾಪಿಸುವಲ್ಲಿ ಸಫಲರಾಗಿದ್ದು, ವೃತ್ತಿ ಬದುಕಿನ 50ರ ಸಂಭ್ರಮದಲ್ಲಿದ್ದಾರೆ.



ವೈದ್ಯಕೀಯ ಕ್ಷೇತ್ರದ ಜೀವನದ ಜೊತೆ-ಜೊತೆಗೆ ಸಾಮಾಜಿಕ ಸೇವೆ ಸಲ್ಲಿಸಬೇಕೆಂಬ ಮಹದಾಸೆಯನ್ನು ಲಯನ್ಸ್ ಕ್ಲಬ್ ಮೂಲಕ ಈಡೇರಿಸಿಕೊಂಡರು. ಅಂತರರಾಷ್ಟ್ರೀಯ ಸಾಮಾಜಿಕ ಸೇವಾ ಸಂಸ್ಥೆ ಲಯನ್ಸ್ ಕ್ಲಬ್‌ನೊಂದಿಗೆ 1974ರಲ್ಲಿ ಸಾಮಾಜಿಕ ಸೇವೆ ಆರಂಭಿಸಿದ ಅವರು, ಆ ಸೇವೆಗೀಗ 50ರ ಸಂಭ್ರಮದಲ್ಲಿದ್ದಾರೆ.

ಲಯನ್ಸ್ ಕ್ಲಬ್ ಮಾತ್ರವಲ್ಲದೇ, ಕನ್ನಡ ಚಳುವಳಿ, ಭಾರತೀಯ ರೆಡ್ ಕ್ರಾಸ್, ಸೇವಾ ದಳ, ಸಿನಿಮಾ ಸಿರಿ ಸೇರಿದಂತೆ ಹಲವಾರು ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಮೂಲಕ ನಾಡು - ನುಡಿ ಸೇವೆಯಲ್ಲಿ ಸದಾ ಮುಂದಿದ್ದಾರೆ.

ಹೀಗೆ, ಡಿಸೆಂಬರ್‌ನಿಂದ ಫೆಬ್ರವರಿ ವರೆಗಿನ ಅವಧಿ ಡಾ. ಬಿ.ಎಸ್. ನಾಗಪ್ರಕಾಶ್ ಪಾಲಿಗೆ ಅದೃಷ್ಟ ಖುಲಾಯಿಸಿದ ದಿನಗಳು ಎನ್ನಬಹುದು.


**ಚಿತ್ರರಂಗ :** ಇವೆಲ್ಲದರ ನಡುವೆ ಚಿತ್ರರಂಗದಲ್ಲೂ ಹೆಸರು ಮಾಡಿದ್ದಾರೆ. 'ಪದ್ಮಾಲಯ ಕಂಬೈನ್ಸ್' ಸ್ಥಾಪಿಸಿ ಅದರ ಮೂಲಕ ಅನೇಕ ಚಿತ್ರಗಳನ್ನು ನಿರ್ಮಿಸಿದ್ದಾರೆ. ಅವರ ನಿರ್ಮಾಣದ ಚಿತ್ರಗಳ ಪೈಕಿ ಸಾಂಗ್ಲಿಯಾನ, ವಿಜಯಕ್ರಾಂತಿ, ರಾಜಣ್ಣ, ದಡ ಸೇರಿದ ದೋಣಿ, ಕಲಿಯುಗ ಕೃಷ್ಣ ಚಿತ್ರಗಳು ಅಪಾರ ಜನ ಮನ್ನಣೆ ಗಳಿಸಿವೆ.

ಚಿತ್ರರಂಗದಲ್ಲಿ ಅನೇಕ ತಾರಾ ನಟರಿಗೆ ಭವಿಷ್ಯವನ್ನು ಕಲ್ಪಿಸಿದ ಶ್ರೇಯಸ್ಸು ಡಾ.ನಾಗಪ್ರಕಾಶ್ ಅವರದ್ದಾಗಿದೆ. ದೇವರಾಜ್, ಶಶಿಕುಮಾರ್, ಕೀರ್ತಿರಾಜ್, ಪ್ರಕಾಶ್ ರೈ ಮತ್ತಿತರರು ಹೆಸರಾಂತ ನಟರಾಗಲು ಡಾ. ನಾಗಪ್ರಕಾಶ್ ಅವರ ಚಿತ್ರಗಳು ಬುನಾದಿ ಹಾಕಿಕೊಟ್ಟಿವೆ. ಬಹುಭಾಷಾ ತಾರೆ ಸೌಂದರ್ಯ ಅವರಿಗೆ ಪ್ರಪ್ರಥಮವಾಗಿ ಚಿತ್ರರಂಗದಲ್ಲಿ ಅವಕಾಶ ಕಲ್ಪಿಸಿದವರು ಡಾ. ನಾಗಪ್ರಕಾಶ್. ದಾವಣಗೆರೆಯಲ್ಲಿ ಪ್ರಪ್ರಥಮ ಬಾರಿಗೆ 1990ರಲ್ಲಿ ಚಲನಚಿತ್ರ ತಾರೆಯರ ಸ್ಟಾರ್ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸಿದ ರೂವಾರಿಯೂ ಅವರಾಗಿದ್ದಾರೆ.

**ದಾನಿ :** ದುಡಿಮೆಯೇ ಮುಖ್ಯವಲ್ಲ, ಎಷ್ಟೇ ದುಡಿದಿದ್ದರೂ ಅದರಲ್ಲಿ ಸ್ವಲ್ಪವನ್ನಾದರೂ ಸಮಾಜ ಸೇವೆಗೆ ಸಮರ್ಪಿಸಿದಾಗ ಮಾತ್ರ ಜೀವನದಲ್ಲಿ ಸಾರ್ಥಕತೆ ಕಂಡುಕೊಳ್ಳಬಹುದು ಎನ್ನುವ ಡಾ. ನಾಗಪ್ರಕಾಶ್, ದಾವಣಗೆರೆ ಲಯನ್ಸ್ ಸಂಸ್ಥೆಯ ಪದವಿ ಪೂರ್ವ ಕಾಲೇಜು ಸ್ಥಾಪನೆಗೆ, ಡಿಸಿಎಂ ಟೌನ್‌ಶಿಪ್‌ನಲ್ಲಿರುವ ವಾಸವಿ ಸೇವಾ ಸಂಘದ ಭೋಜನಾಲಯ ನಿರ್ಮಾಣಕ್ಕೆ, ಅವೋಪ ಕಟ್ಟಡಕ್ಕೆ ಉದಾರವಾಗಿ ದೇಣಿಗೆ ನೀಡಿದ್ದಾರೆ.

ಕಡು ಬಡತನದಲ್ಲಿರುವ ಇಬ್ಬರು ವಿದ್ಯಾರ್ಥಿಗಳನ್ನು ವೈದ್ಯಕೀಯ ವಿದ್ಯಾಭ್ಯಾಸ, ಓರ್ವ ವಿದ್ಯಾರ್ಥಿಯನ್ನು ಇಂಜಿನಿಯರಿಂಗ್ ವಿದ್ಯಾಭ್ಯಾಸದ ಪೂರ್ಣ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಹೀಗೆ ವೃತ್ತಿ ಮತ್ತು ಪ್ರವೃತ್ತಿ ಎರಡರಲ್ಲೂ ಯಶಸ್ಸು ಕಂಡಿರುವ ಡಾ. ನಾಗಪ್ರಕಾಶ್ ಅವರಿಗೆ ಭವಿಷ್ಯದ ದಿನಗಳಲ್ಲೂ ಸದಾವಕಾಶಗಳು ದೊರೆಯಲಿ.


**ಅಭಿನಂದನೆಗಳು**



ನಮ್ಮ ಪ್ರೀತಿಯ **ಡಾ|| ನಾಗಪ್ರಕಾಶ್‌ರವರಿಗೆ** ತಮ್ಮ 50 ವರ್ಷ ಸಾರ್ಥಕ ವೈದ್ಯಕೀಯ ಸೇವೆಯು ಎಲ್ಲರೂ ಮೆಚ್ಚವಂತದ್ದು. ತಮ್ಮ ಈ ಪರಮ ಪವಿತ್ರ ಕರ್ತವ್ಯವು ಬೇರೆ ವೈದ್ಯರಿಗೆ ಆದರ್ಶ. ತಮ್ಮ ಈ ಸಾರ್ಥಕ ಸೇವಾ ಬದುಕು ಭಗವಂತನು ಸಹ ಮೆಚ್ಚುವಂತದ್ದಾಗಿದೆ. ಈ ಎಲ್ಲಾ ಕಾರಣಗಳಿಂದ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸಮಸ್ತ ಕನ್ನಡದ ಮನಸ್ಸುಗಳ ಪರವಾಗಿ ಹೃದಯ ತುಂಬಿ ಅಭಿನಂದಿಸುವೆವು.



**ಬಿ. ವಾಮದೇವಪ್ಪ**
ಅಧ್ಯಕ್ಷರು ಮತ್ತು ಪದಾಧಿಕಾರಿಗಳು,
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.



**ಸಮಾಜ ಸೇವೆ ಮೂಲಕ ಬದುಕಿನ ಸಾರ್ಥಕತೆ ಕಂಡ ಡಾ. ಬಿ.ಎಸ್. ನಾಗಪ್ರಕಾಶ್**

ಇಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಯುನಿಟಿ ಹೆಲ್ತ್ ಸೆಂಟರ್‌ನ ವೈದ್ಯರಾದ **ಡಾ. ಬಿ.ಎಸ್. ನಾಗಪ್ರಕಾಶ್** ಅವರು, ತಮ್ಮ 50ನೇ ವಿವಾಹ ವಾರ್ಷಿಕೋತ್ಸವವನ್ನೂ ಸಹ ಆಚರಿಸಿಕೊಳ್ಳುತ್ತಾ ತುಂಬು ಕುಟುಂಬದಲ್ಲಿ ತೃಪ್ತಿ ಕಂಡಿದ್ದಾರೆ.

ಇದೇ ಸಂದರ್ಭದಲ್ಲಿ ತಮ್ಮ ವೈದ್ಯ ವೃತ್ತಿ ಜೀವನದಲ್ಲಿ ಸಹ ನಿರಂತರ 50 ವರ್ಷಗಳ ಕಾಲ ಸೇವೆ ಸಲ್ಲಿಸಿ ಯಶಸ್ಸು ಕಂಡ ಡಾ. ಬಿ.ಎಸ್. ನಾಗಪ್ರಕಾಶ್ ಅವರು ವೈದ್ಯ ವೃತ್ತಿಯಲ್ಲಿ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ ತೊಡಗಿದ್ದಾರೆ. ಅವರ ಪ್ರಯತ್ನ, ಶ್ರದ್ಧೆ, ಶ್ರಮದಿಂದ ವೈದ್ಯಕೀಯ ಕ್ಷೇತ್ರದಲ್ಲಿ ಜನಪ್ರಿಯತೆ ಗಳಿಸಿ ಹೆಸರು ಮಾಡಿದ್ದಾರೆ. ವೃತ್ತಿಯಲ್ಲಿ ತೃಪ್ತಿ ಕಂಡ ಇವರು ಪ್ರವೃತ್ತಿಯಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಇವರು ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಜಿಲ್ಲಾ ರಾಜ್ಯಪಾಲರಾಗಿ ಅನೇಕ ಸೇವೆ ಸಲ್ಲಿಸುತ್ತಾ ಇರುವುದಲ್ಲದೇ ಅನೇಕ ಸಂಘ-ಸಂಸ್ಥೆಗಳ ಮೂಲಕ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ವೃತ್ತಿ ಮತ್ತು ಪ್ರವೃತ್ತಿಯಲ್ಲಿ ಸಮಾನ ಆಸಕ್ತಿ, ಉತ್ಸಾಹ ಹಾಗೂ ಜವಾಬ್ದಾರಿಯನ್ನು ತೋರುತ್ತಾ ಬಂದಿದ್ದಾರೆ. ಡಾ. ಬಿ.ಎಸ್. ನಾಗಪ್ರಕಾಶ್‌ರವರು ವೃತ್ತಿ ಕರ್ತವ್ಯ, ಆದರೆ ಪ್ರವೃತ್ತಿ ಪ್ರೇರಣೆ ಎಂಬ ಮಾತು ಅರಿತು ನಡೆದು ಬದುಕಿನಲ್ಲಿ ತೃಪ್ತಿ ಕಂಡಿರುವ ಒಬ್ಬ ಬಹುಮುಖ ವ್ಯಕ್ತಿತ್ವದ ಅಪರೂಪದ ವ್ಯಕ್ತಿ. ದೇವರು ಇವರಿಗೆ ಆರೋಗ್ಯ, ನೆಮ್ಮದಿ ದಯಪಾಲಿಸಲಿ ಎಂದು ಶುಭ ಕೋರುವ



**-ಲ. ಹೆಚ್.ವಿ. ಮಂಜುನಾಥಸ್ವಾಮಿ,** ಸಿವಿಲ್ ಇಂಜಿನಿಯರ್

# ಮನುಷ್ಯನ ಹುಟ್ಟು ಹಬ್ಬವಲ್ಲ, ನೋವು-ದುಃಖವಾಗಿದೆ

## ರಾಜೋಪಚಾರ ಪೂಜಾ ಕಾರ್ಯಕ್ರಮದಲ್ಲಿ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು



ದಾವಣಗೆರೆ, ಡಿ.3- ಮಾನವನ ಹುಟ್ಟು ಎಂಬುದು ಹಬ್ಬವಲ್ಲ, ಅದು ದುಃಖ ಹಾಗೂ ನೋವು ಆಗಿದೆ ಎಂದು ಯಡೂರು ಶ್ರೀಶೈಲಂನ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ತಿಳಿಸಿದರು.

ಇಲ್ಲಿನ ಶ್ರೀಶೈಲ ಮಠದಲ್ಲಿ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ 53ನೇ ಜನ್ಮದಿ ನಾಚರಣೆ ಪ್ರಯುಕ್ತ ಮಠದ ಸಂಸ್ಕೃತ ಪಾಠ ಶಾಲಾ ಶಿಷ್ಯರು ಆಯೋಜಿಸಿದ್ದ ರಾಜೋಪಚಾರ ಪೂಜಾ ಮತ್ತು ಗೌರವ ಸಮರ್ಪಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಪರಮಾತ್ಮನಲ್ಲಿ ಒಂದಾಗಿರುವ ಜೀವಾತ್ಮ ಎಲ್ಲಿಯವರೆಗೆ ಪರಮಾತ್ಮನಲ್ಲಿ ಇರುತ್ತಾನೋ ಅಲ್ಲಿಯವರೆಗೆ ಸತ್-ಚಿತ್ ಆನಂದ ಮತ್ತು ನಿತ್ಯ ಪರಿಪೂರ್ಣ ಸ್ವರೂಪನಾಗಿರುತ್ತಾನೆ. ಆದರೆ ಪರಮಾತ್ಮನಿಂದ ಬೇರ್ಪಟ್ಟ ನಂತರ ಅವನು ಜೀವಾತ್ಮನಾಗಿ ಸಂಸಾರಿಕನಾಗಿ ಎಲ್ಲ ದುಃಖಗಳನ್ನು ಅನುಭವಿಸಲು ಬಾಧ್ಯನಾಗುತ್ತಾನೆ ಎಂದರು.

ಮಾನವನ ಹುಟ್ಟು, ಹಬ್ಬವಾಗಬೇಕಾದರೆ ಅವನು ಪರೋಪಕಾರ ಗುಣಗಳನ್ನು ಅಳವಡಿಸಿಕೊಂಡು ಸಮಾಜ ಸೇವೆ ಹಾಗೂ ಲೋಕ ಕಲ್ಯಾಣಕ್ಕಾಗಿ ಶ್ರಮಿಸಬೇಕು. ಆಗ ಮಾತ್ರ ಮನುಷ್ಯನ ಹುಟ್ಟು ಲೋಕಕ್ಕೆಲ್ಲ ಹಬ್ಬವಾಗಲಿದೆ ಎಂದು ಹೇಳಿದರು.

ಜಗತ್ತೇ ಮೆಚ್ಚುವ ಸಾಧನೆ ಮಾಡಿದ್ದಲ್ಲಿ ಮಾತ್ರ ಹುಟ್ಟು ಮತ್ತು ಸಾವಿಗೆ ಅರ್ಥ ಬರಲಿದೆ ಎಂಬ ಮಾತನ್ನು ಕಬೀರರೂ ತಮ್ಮ ದೋಹೆಗಳಲ್ಲಿ ತಿಳಿಸಿದ್ದಾರೆ ಎಂದು ವಿವರಿಸಿದರು.

ಬದುಕಿನ ಪ್ರತಿ ಗಳಿಗೆಯಲ್ಲೂ ಸಾರ್ಥಕ ಜೀವನ ನಡೆಸಬೇಕು. ಪರಮಾತ್ಮನಿಂದ ಜೀವಾತ್ಮನಾಗಿ ಬಂದಾಗ ಪುನಃ ಪರಮಾತ್ಮನನ್ನು ಪ್ರಾಪ್ತಿಮಾಡಿಕೊಳ್ಳುತ್ತಾ ಸಾಗಿದ ಮನುಷ್ಯನ ಜೀವನ ಸಾರ್ಥಕವಾಗಲಿದೆ ಎಂದು ಹೇಳಿದರು.

> **ಜೀವನವು ಪುಸ್ತಕವಿದ್ದಂತೆ. ಮೊದಲ ಮತ್ತು ಕೊನೆ ಪುಟ ಹುಟ್ಟು ಮತ್ತು ಸಾವು ಇದ್ದಂತೆ. ಹಾಗಾಗಿ ಪುಸ್ತಕದ ಮಧ್ಯದ ಪುಟಗಳಲ್ಲಿ ಜನ ಮೆಚ್ಚುವ ಉತ್ತಮ ಕಾರ್ಯಗಳನ್ನೇ ತುಂಬಬೇಕು.**
>
> **- ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು**

ಲಿಂ. ಶ್ರೀಶೈಲ ವಾಗೀಶ ಪಂಡಿತಾರಾಧ್ಯ ಶ್ರೀಗಳು ಮತ್ತು ಲಿಂ. ಶ್ರೀಶೈಲ ಉಮಾಪತಿ ಪಂಡಿತಾರಾಧ್ಯ ಶ್ರೀಗಳ ಗದ್ದುಗೆ ದರ್ಶನ ಪಡೆಯಲು ಇಲ್ಲಿಗೆ ಬಂದಾಗ ಅವರ ದರ್ಶನ ಭಾಗ್ಯದಿಂದ ಇಂದು ರಾಜೋಪಚಾರ ಪೂಜೆ ಪ್ರಾಪ್ತಿಯಾಗಿದೆ ಎಂದರು.

ಈ ವೇಳೆ ಶ್ರೀಶೈಲ ಶಾಸ್ತ್ರಿ, ಬಸವರಾಜ್ ಶಾಸ್ತ್ರಿ, ಬೆಳ್ಳೂಡಿ ಪ್ರಕಾಶ್, ಪರಮೇಶ್ವರಪ್ಪ, ಮುರುಗೇಶ್ ಆರಾಧ್ಯ, ಬಕ್ಕೇಶ್ ನಾಗನೂರು ಹಾಗೂ ಸಂಸ್ಕೃತ ಪಾಠ ಶಾಲಾ ಮಕ್ಕಳು ಇದ್ದರು.

# ದಾವಣಗೆರೆ ವಿ.ವಿ. ನೂತನ ಸಿಂಡಿಕೇಟ್ ಸದಸ್ಯರುಗಳಿಗೆ ಸಚಿವರಿಂದ ಸನ್ಮಾನ



ದಾವಣಗೆರೆ, ಡಿ.3- ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ ಇತ್ತೀಚೆಗೆ ನೂತನ ನಾಮನಿರ್ದೇಶನಗೊಂಡ ಸದಸ್ಯರುಗಳು ಗಣಿ, ಭೂವಿಜ್ಞಾನ, ತೋಟಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಇಂದು ಭೇಟಿ ಮಾಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ನಿಮ್ಮಗಳ ಸೇವಾ ಅವಧಿಯಲ್ಲಿ ದಾವಣಗೆರೆ ವಿಶ್ವವಿದ್ಯಾಲಯವು ಗಮನಾರ್ಹ ಪ್ರಗತಿ ಸಾಧಿಸಲಿ ಹಾಗೂ ಅಭಿವೃದ್ಧಿ ಪಥದತ್ತ ಸಾಗಲಿ ಎಂದು ಆಶಿಸಿ ನೂತನ ಸದಸ್ಯರುಗಳಿಗೆ ಸನ್ಮಾನಿಸಿ ಶುಭ ಹಾರೈಸಿದರು.

ನೂತನ ನಾಮನಿರ್ದೇಶಿತ ಸದಸ್ಯರಾದ ಡಾ ಪ್ರಶಾಂತ್ ಎನ್. ಸಿ., ದ್ಯಾಮಪ್ಪ, ಶಾಬೀರ್ ಅಲಿಖಾನ್, ಡಾ ಜಿ. ಕೆ. ಪ್ರೇಮ, ತಿಪ್ಪೇಸ್ವಾಮಿ ಎಚ್., ಪ್ರಶಾಂತ್ ಆರ್. ಟಿ. ಹಾಗೂ ದವನ್ ಕಾಲೇಜು ಕಾರ್ಯದರ್ಶಿ ವೀರೇಶ್ ಪಟೇಲ್ ಉಪಸ್ಥಿತರಿದ್ದರು.

# ಕೆಟಿಜೆ ನಗರ ಠಾಣೆ ಎಎಸ್ಐ ಈರಣ್ಣ ಲೋಕಾಯುಕ್ತ ಬಲೆಗೆ



ದಾವಣಗೆರೆ, ಡಿ.3- ಗಲಾಟೆ ಪ್ರಕರಣದ ದೋಷಾರೋಪ ಪಟ್ಟಿಯಿಂದ ಇಬ್ಬರ ಹೆಸರುಗಳನ್ನು ಕೈಬಿಡಲು ಆರೋಪಿಯಿಂದ 50,000 ರೂ. ಲಂಚ ಪಡೆಯುತ್ತಿದ್ದ ಕೆಟಿಜೆ ನಗರ ಪೊಲೀಸ್ ಠಾಣೆಯ ಎಎಸ್ಐ ಈರಣ್ಣ, ಲೋಕಾ ಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಆರಂಭದಲ್ಲಿ 1 ಲಕ್ಷ ಲಂಚಕ್ಕೆ ಬೇಡಿಕೆಯಿಟ್ಟು, ಮೊದಲ ಕಂತಿನಲ್ಲಿ ಅರ್ಧ ಹಣ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಎಎಸ್ಐ ಈರಣ್ಣ ಅವರನ್ನು ವಶಕ್ಕೆ ಪಡೆದಿದ್ದಾರೆ.

ಗಲಾಟೆಯ ವಿಚಾರವಾಗಿ ಮಣಿಕಂಠ ಆಚಾರ್ಯ, ಅವರ ತಾಯಿ ಭಾಗ್ಯಮ್ಮ ಮತ್ತು ಪತ್ನಿ ಅರ್ಚನಾ ವಿರುದ್ಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಎಎಸ್ಐ ಈರಣ್ಣ, ಭಾಗ್ಯಮ್ಮ ಮತ್ತು ಅರ್ಚನಾ ಅವರ ಹೆಸರನ್ನು ದೋಷಾರೋಪಪಟ್ಟಿಯಿಂದ ಕೈಬಿಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಮಣಿಕಂಠ ಆಚಾರ್ಯ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಸಿ.ಮಧುಸೂದನ್, ಪ್ರಭು ಬಸೂರಿನ ಹಾಗೂ ಪಿ. ಸರಳ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

# ಪದ್ಮಶಾಲಿ ಸಮಾಜ ಸೇವಾ ಸಂಘಕ್ಕೆ ಎಸ್‌ಟಿಪಿ ತಿಪ್ಪೇಶ್ ಅಧ್ಯಕ್ಷ






**(1ನೇ ಪುಟದಿಂದ)** ಸತ್ಯನಾರಾಯಣ, ಸಹ ಕಾರ್ಯದರ್ಶಿ ಯಾಗಿ ಡಿ.ಎಸ್.ಕೆ. ಪರಶುರಾಮ ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ಮಂಚಿ ನಾಗರಾಜ್, ಲೆಕ್ಕ ಪರಿಶೋಧಕರಾಗಿ ವಾಸಿ ರವಿಕುಮಾರ್, ಸಂಚಾಲಕರಾಗಿ ಟಿ. ಪರಶುರಾಮ್, ಸಂಘಟನಾ ಕಾರ್ಯದರ್ಶಿಯಾಗಿ ನಂದಿಗಾವಿ ಪರಶುರಾಮ್ ಆಯ್ಕೆಯಾಗಿದ್ದಾರೆ.

ಮಂಚಿ ತಿಪ್ಪೇಸ್ವಾಮಿ, ಸಂಗಿತ್ ರಮೇಶ್, ಪೊರಾಳ್ ಅಂಜಿನಪ್ಪ, ಎಸ್. ಅಣ್ಣಪ್ಪ, ಲಿಂಗಂಪಲ್ಲಿ ವೆಂಕಟೇಶ್, ಹೊಸಮನಿ ಮಂಜುನಾಥ, ನೀಲಿ ಲಕ್ಷ್ಮಣ, ಎಸ್.ಕೆ. ಬಸವರಾಜ್, ಮಂಜುನಾಥ ವಿಶ್ವನಾಥ, ಗುರುಂ ತಿಮ್ಮರಾಜು, ಮಂಚಿ ಚಂದ್ರು, ಬೊಮ್ಮ ರಂಗನಾಥ್ ಅವರುಗಳು ನಿರ್ದೇಶಕರುಗಳಾಗಿದ್ದಾರೆ.

# ಬ್ಯಾಂಕ್ ಖಾತೆಗಳಲ್ಲಿ : ನೂತನ ಕಾಯ್ದೆಗೆ ಅಸ್ತು

ಹೊಸದಿಲ್ಲಿ, ಡಿ. 3- ಬ್ಯಾಂಕ್ ಖಾತೆದಾರರು ತಮ್ಮ ಖಾತೆಗಳಲ್ಲಿ ನಾಲ್ಕು ನಾಮಿನಿಗಳನ್ನು ಹೊಂದಲು ಅವಕಾಶ ನೀಡುವ ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಮಸೂದೆ, 2024 ಅನ್ನು ಲೋಕಸಭೆ ಮಂಗಳವಾರ ಅಂಗೀಕರಿಸಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪ್ರಾಯೋಗಿಕವಾಗಿ ಮಂಡಿಸಿದ ಈ ಮಸೂದೆಯನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಠೇವಣಿದಾರರಿಗೆ ಸತತ ಅಥವಾ ಏಕಕಾಲಿಕ ನಾಮನಿರ್ದೇಶನ ಸೌಲಭ್ಯದ ಆಯ್ಕೆ ಇರುತ್ತದೆ, ಆದರೆ ಲಾಕರ್ ಹೊಂದಿರುವವರು ಸತತ ನಾಮನಿರ್ದೇಶನವನ್ನು ಮಾತ್ರ ಹೊಂದಿರುತ್ತಾರೆ ಎಂದು ಈ ಸಂದರ್ಭದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನಮ್ಮ ಬ್ಯಾಂಕುಗಳನ್ನು ಸುರಕ್ಷಿತವಾಗಿ, ಸ್ಥಿರವಾಗಿ, ಆರೋಗ್ಯಕರವಾಗಿರಿಸುವುದು ಉದ್ದೇಶವಾಗಿದೆ ಮತ್ತು 10 ವರ್ಷಗಳ ನಂತರ ನೀವು ಫಲಿತಾಂಶವನ್ನು ನೋಡುತ್ತಿದ್ದೀರಿ ಎಂದೂ ಸೀತಾರಾಮನ್ ಹೇಳಿದ್ದಾರೆ.






# ಶ್ರೀಮತಿ ನಂದಾ ಪ್ರಭುಸ್ವಾಮಿ ಲಿಂಗೈಕ್ಯ



ದಾವಣಗೆರೆ, ಎಂ.ಸಿ.ಸಿ. 'ಎ'. ಬ್ಲಾಕ್, 12ನೇ ಮೇನ್, ನಂ. 3714/145ರ ವಾಸಿ ಚೌಕೀಪೇಟೆಯ ಶ್ರೀ ಸಿದ್ದಲಿಂಗೇಶ್ವರ ಎಂಟರ್ ಪ್ರೈಸಸ್ ಮಾಲೀಕರಾದ ಶ್ರೀ ಕೊಳಹಾಳು ಮಠದ ಪ್ರಭುಸ್ವಾಮಿಯವರ ಧರ್ಮಪತ್ನಿ

## ಶ್ರೀಮತಿ ನಂದಾ ಪ್ರಭುಸ್ವಾಮಿ

ಅವರು ದಿನಾಂಕ : 03.12.2024ರ ಮಂಗಳವಾರ ಬೆಳಗಿನಜಾವ 3.00 ಗಂಟೆಗೆ ತಮ್ಮ ನಿವಾಸದಲ್ಲಿ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 58 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಲಿಂಗೈಕ್ಯರ ಅಂತ್ಯಕ್ರಿಯೆಯನ್ನು

ದಿನಾಂಕ : 05.12.2024ರ ಗುರುವಾರ ಮಧ್ಯಾಹ್ನ 11.30 ಗಂಟೆಗೆ ಶಾಮನೂರಿನ ಗ್ಲಾಸ್ ಹೌಸ್ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**

**ಪತಿ : ಕೆ.ಎಂ. ಪ್ರಭುಸ್ವಾಮಿ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು**

**ಕೊಳಹಾಳು ಮಠದ ವಂಶಸ್ಥರು**

**ಮೊ. : 99725 13165, 99023 80706**

# ತಾಜ್ ಮಹಲ್ ಸ್ಫೋಟಿಸುವುದಾಗಿ ಬಾಂಬ್ ಬೆದರಿಕೆ

ಲಖನೌ, ಡಿ.3- ತಾಜ್ ಮಹಲ್ ಸ್ಫೋಟಿಸುವುದಾಗಿ ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆಗೆ ಮಂಗಳವಾರ ಇಮೇಲ್ ಮೂಲಕ ಬೆದರಿಕೆ ಬಂದಿದ್ದು, ಪರಿಶೀಲನೆ ನಂತರ ಇದು ಹುಸಿ ಬಾಂಬ್ ಬೆದರಿಕೆ ಎಂದು ಪೊಲೀಸರು ಖಚಿತಪಡಿಸಿದ್ದಾರೆ.

ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳವನ್ನು ಪ್ರೇಮಸೌಧ ತಾಜ್ ಮಹಲ್ ಅನ್ನು ತೀವ್ರ ತಪಾ ಸಣೆಗೆ ಒಳಪಡಿಸಿದ್ದು, ಅನುಮಾನಾಸ್ಪದ ವಾಗಿ ಏನೂ ಪತ್ತೆಯಾಗಿಲ್ಲ ಎಂದು ಸಹಾಯಕ ಪೊಲೀಸ್ ಕಮಿಷನರ್ ಸಯ್ಯದ್ ಅರೀಬ್ ಅಹ್ಮದ್ ತಿಳಿಸಿದ್ದಾರೆ. ತಾಜ್ ಮಹಲ್ ಅನ್ನು ಸ್ಫೋಟಿಸುವ ಬೆದರಿಕೆ ಇರುವ ಇಮೇಲ್ ಅನ್ನು ಉತ್ತರ ಪ್ರದೇಶ ಪ್ರವಾಸೋದ್ಯಮ ಕಚೇರಿ ಸ್ವೀಕರಿಸಿದೆ. ಈ ಕುರಿತು ಇಲಾಖೆಯವರು ನಮಗೆ ಮಾಹಿತಿ ನೀಡಿದ ನಂತರ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಮತ್ತು ಇತರ ತಂಡಗಳು ತಾಜ್ ಮಹಲ್ ಅನ್ನು ಪರಿಶೀಲನೆ ನಡೆಸಿದ್ದು, ಇದು ಹುಸಿ ಬಾಂಬ್ ಬೆದರಿಕೆ ಎಂದು ಅಹ್ಮದ್ ತಿಳಿಸಿದ್ದಾರೆ.

# ಭಾರತದ ವಾಹಿನಿಗಳ ಪ್ರಸಾರ ನಿಷೇಧಕ್ಕೆ ಕೋರ್ಟ್‌ನಲ್ಲಿ ಅರ್ಜಿ

ಢಾಕಾ, ಡಿ.3- 'ಸ್ಟಾರ್ ಪ್ಲಸ್', 'ಝೀ ಬಾಂಗ್ಲಾ', 'ರಿಪಬ್ಲಿಕ್ ಬಾಂಗ್ಲಾ' ಸೇರಿದಂತೆ ಭಾರತದ ಎಲ್ಲ ವಾಹಿನಿಗಳ ಪ್ರಸಾರವನ್ನು ನಿಷೇಧಿಸಬೇಕು ಎಂದು ಕೋರಿ ಬಾಂಗ್ಲಾದೇಶದ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಭಾರತದ ಟಿ.ವಿ ವಾಹಿನಿಗಳಲ್ಲಿ ಪ್ರಚೋದನಾತ್ಮಕ ಸುದ್ದಿಗಳನ್ನು ಬಿತ್ತರಿಸಲಾಗುತ್ತಿದೆ ಎಂದು ಆರೋಪಿಸಿ ಈ ಅರ್ಜಿ ಸಲ್ಲಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ವಕೀಲ ಇಖ್ಲಾಸ್ ಉದ್ದೀನ್ ಭುಯಿಯಾಂ ಅವರು ಅರ್ಜಿ ಸಲ್ಲಿಸಿದ್ದು, ಸೋಮವಾರ ಈ ವಿಷಯವನ್ನು ದೃಢಪಡಿಸಿದ್ದಾರೆ ಎಂದು 'ದಿ ಢಾಕಾ ಟ್ರಿಬ್ಯೂನ್' ವರದಿ ಮಾಡಿದೆ.


50 years



ವೈದ್ಯ ವೃತ್ತಿಯ ಸುವರ್ಣ ಮಹೋತ್ಸವ

❋ ಧನ್ಯೋಸ್ಮಿ ❋

ನನ್ನ ಕರ್ಮಭೂಮಿ ಆದ ದಾವಣಗೆರೆ ಜಿಲ್ಲೆ ಹಾಗೂ ಸುತ್ತಮುತ್ತಲಿನ ನನ್ನೆಲ್ಲ ಸಮಸ್ತ ಜನತೆಗೆ ನನ್ನ ಅನಂತ ವಂದನೆಗಳು. ಕಾರ್ತಿಕ ಶುದ್ಧ ನವಮಿ ಆದ ಇಂದಿಗೆ ನನ್ನ ವೈದ್ಯ ವೃತ್ತಿಯ 50ನೇ ಸುದೀರ್ಘ ವರ್ಷ ಮತ್ತು ನನ್ನ ವೈವಾಹಿಕ ಜೀವನವೂ ಸಹ 50 ವರ್ಷ ಪೂರ್ಣಗೊಂಡಿದೆ ಎಂದು ತಿಳಿಸಲು ಬಹಳ ಸಂತೋಷ ಮತ್ತು ಹೆಮ್ಮೆಯಾಗುತ್ತದೆ. ಈ 50 ಸಂವತ್ಸರಗಳಲ್ಲಿ ನನ್ನ ಸೇವೆಯನ್ನು ಸ್ವೀಕರಿಸಿ, ನನಗೆ ಆಶ್ರಯವನ್ನು ಕೊಟ್ಟು, ಅನ್ನವನ್ನು ಕೊಟ್ಟು ಪ್ರೋತ್ಸಾಹ ಮಾಡಿ ಹಾಗೂ ನನ್ನ ವ್ಯಕ್ತಿತ್ವವನ್ನು ಬೆಳೆಸಿ, ನನಗೆ ಆಶೀರ್ವದಿಸಿದ ನಿಮಗೆಲ್ಲಾ ನನ್ನ ಅನಂತ ಅನಂತ ಧನ್ಯವಾದಗಳು. ನನ್ನ ಸುದೀರ್ಘ ಸೇವಾ ಅವಧಿಯಲ್ಲಿ ಜಾತಿ, ಮತ, ಮೇಲು, ಕೀಳು, ಭೇದವಿಲ್ಲದೆ ಕಳಂಕ ರಹಿತವಾಗಿ ನಿಸ್ವಾರ್ಥ ಸೇವೆ ಸಲ್ಲಿಸಿರುವ ತೃಪ್ತಿ ನನ್ನದು. ಸಮಾಜ ಮುಖಿಯಾಗಿ ಸಾಕಷ್ಟು ಸಂಘ-ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ಹಾಗೂ ವೃತ್ತಿ ಬದುಕಿನ ಏರಿಳಿತಗಳಲ್ಲಿ ಸಹಕರಿಸಿದ ಗುರು-ಹಿರಿಯರಿಗೆ, ವೈದ್ಯ ಮಿತ್ರರಿಗೆ, ಸಂಘ-ಸಂಸ್ಥೆಗಳ ಸದಸ್ಯರಿಗೆ ಹಾಗೂ ಸುತ್ತಮುತ್ತಲಿನ ದಾವಣಗೆರೆ ಜಿಲ್ಲೆಯ ಸಮಸ್ತ ಜನತೆಗೆ ನಾನು ಆಭಾರಿಯಾಗಿದ್ದೇನೆ. ಪ್ರತೀ ರೋಗಿಯಲ್ಲಿಯೂ ದೇವರನ್ನು ಕಾಣುತ್ತಾ, ಸಾರ್ಥಕ ಸೇವೆಯನ್ನು ಮಾಡುತಿದ್ದೇನೆ. ಇನ್ನು ಮುಂದೆಯೂ ನಿಮ್ಮೆಲ್ಲರ ಸೇವೆಯನ್ನು ಮಾಡಿ ನಿಮ್ಮ ಋಣವನ್ನು ತೀರಿಸುವ ಪ್ರಯತ್ನ ಮಾಡುತ್ತಾ ನನ್ನ ವೃತ್ತಿಯಲ್ಲಿ ಹೊಸ ಇತಿಹಾಸವನ್ನೇ ಬರೆಯುತ್ತೇನೆ. ಇನ್ನಷ್ಟು ಸಮಾಜಮುಖಿಯಾಗಿ ನಿಮ್ಮೊಟ್ಟಿಗಿರಲು ಭಗವಂತನ ಕೃಪೆಯನ್ನು ಬೇಡುತ್ತಾ, ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮುಂಬರುವ ದಿನಗಳಲ್ಲಿ ನನ್ನ ಸುಪುತ್ರನಾದ ಡಾ|| ಬಿ.ಎನ್. ಅಭಿಷೇಕ್‌ರವರ ಮೇಲೆಯೂ ಸಹ ತಮ್ಮೆಲ್ಲರ ಆಶೀರ್ವಾದ ಹಾಗೂ ಸಹಕಾರ ಇರಲೆಂದು ತಮ್ಮಲ್ಲಿ ಸವಿನಯ ಪ್ರಾರ್ಥನೆಗಳು



ಡಾ|| ಬಿ.ಎಸ್.ನಾಗಪ್ರಕಾಶ್

ಯೂನಿಟಿ ಹೆಲ್ತ್ ಸೆಂಟರ್

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas